DOP 15th of every month from Udupi HPO
ಬೆಲೆ ರೂ.2.50

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101.
ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.
ಫೋನ್ : 2531493 (O), 2530851 (R), ಮೊಬೈಲ್ : 94484 37893

# ಶ್ರೀ ಶಾರದಾ

ಮಾಸಪತ್ರಿಕೆ - 15 ಮಾರ್ಚ್ 2009

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102. ☎ 2520754

ಸಂಪುಟ-9 ಸಂಚಿಕೆ-3 ಪುಟಗಳು-6 Registered Under No.J/UDP/1260/2009-2011 Dated from 01-12-2008 to 30-11-2011.



## ಶ್ರೀಶಾರದಾ ದೇವಸ್ಥಾನ

ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 2.
ಫೋನ್ : 2520754

ಪ್ರಿಯರೇ, ತಾ.10-03-2009

ಸ್ವಸ್ತಿ ಶ್ರೀ ಸರ್ವಧಾರಿ ನಾಮ ಸಂ।ರದ ಮೀನ ಮಾಸ ದಿನ ೨೦ ಸಲುವ ಚೈತ್ರ ಶುದ್ಧ ನವಮಿ ತಾ.03-04-2009ನೇ ಶುಕ್ರವಾರ ಸಂಜೆ ಗಂಟೆ 5-00ರಿಂದ

**ಕಿರು ನವರಾತ್ರಿಯ ಶುಭ ಸಮಯದಲ್ಲಿ**
**ಪರಿಸರದ ಭಕ್ತ ಬಾಂಧವರು ಭಕ್ತಿ-ಪ್ರೀತಿಯಿಂದ ಪೂಜಿಸಿಕೊಂಡು ಬರುತ್ತಿರುವ**
**ಶ್ರೀಶಾರದಾ ಪರಮೇಶ್ವರೀ ದೇವರ ಸನ್ನಿಧಿಯಲ್ಲಿ**

### ಸಾಮೂಹಿಕ ಶ್ರೀದುರ್ಗಾ ನಮಸ್ಕಾರ ಪೂಜೆಯು

ನೆರವೇರಲಿದೆ.

ಪಾಲ್ಗೊಳ್ಳಲಿರುವ ಭಕ್ತಾದಿಗಳು ಶ್ರೀಶಾರದಾ ಮಂಟಪದ ಮೆನೇಜರ್‌ರವರಲ್ಲಿ ರೂ.125/-ನ್ನು ಸಲ್ಲಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

ದುರ್ಗಾಮಾತೆಗೆ ಅರ್ಪಿಸಲು ಹಣ್ಣು, ಹೂವು ಇತ್ಯಾದಿಗಳನ್ನು ಪೂಜಾರಂಭಕ್ಕೆ ಮೊದಲು ತಂದು ನೀಡಬಹುದು. ಪೂಜೆಗೆ ಬರುವಾಗ ಹರಿವಾಣ, ಉದ್ಧರಣೆ ತರಬೇಕಾಗಿ ವಿನಂತಿ.

ಅಪರಾಹ್ನ 3 ರಿಂದ : ದೀಪವಿಟ್ಟು ಮಂಡಲ ರಚನೆ, ಭಕ್ತರು ಹಾಗೂ ಋತ್ವಿಜರಿಂದ ಸಪ್ತಶತೀ ಪಾರಾಯಣ.

ಸಂಜೆ 5 ರಿಂದ : ಶ್ರೀಶಾರದಾ ದೇವಸ್ಥಾನದಲ್ಲಿ ಸಾಮೂಹಿಕ ಪ್ರಾರ್ಥನೆ, ಸೇವಾ ಕರ್ತ್ರಗಳಿಂದ ಪೂಜಾ ಸಂಕಲ್ಪ, ಸಹಸ್ರನಾಮ ಪಾರಾಯಣ, ಅಷ್ಟೋತ್ತರ ಕುಂಕುಮಾರ್ಚನೆ, ಪುಷ್ಪಾಂಜಲಿ ನಮಸ್ಕಾರ,
: ಮಹಾಪೂಜೆ, ತೀರ್ಥಪ್ರಸಾದ ವಿತರಣೆ, ಭೋಜನ ಪ್ರಸಾದ.

**ತಾ.27-03-2009ರಿಂದ ತಾ.03-04-2009ರ ವರೆಗೆ ಕಿರುನವರಾತ್ರಿಯ ಪ್ರಯುಕ್ತ ವಿಶೇಷ ಪೂಜೆಯು ಜರಗಲಿರುವುದು.**

**- ಶ್ರೀಶಾರದಾ ದೇವಸ್ಥಾನ ವೇದಿಕೆ**

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ)

ಕುಂಜಿಬೆಟ್ಟು, ಉಡುಪಿ - 2.



ನಮ್ಮ ಸಂಘದ ಆಶ್ರಯದಲ್ಲಿ

### ಶ್ರೀ ಶಂಕರಜಯಂತಿ ಕಾರ್ಯಕ್ರಮವು

ತಾ.30-04-2009 ಗುರುವಾರದಂದು ನಡೆಯಲಿದೆ.

ಇದೇ ದಿನ

### ಸಾಮೂಹಿಕ ಉಪನಯನ

**ನೆರವೇರಲಿದೆ ಹಾಗೂ ಶ್ರೀಶಾರದಾ ಮಂದಿರದಲ್ಲಿ ವಿಶೇಷ ಪೂಜೆಯೂ ಜರಗಲಿದೆ.**

ಸರ್ವರಿಗೂ ಆದರದ ಸ್ವಾಗತ :

- ಕಾರ್ಯದರ್ಶಿ

ಆಸಕ್ತ ಸಮಾಜ ಬಾಂಧವರು ಇದರಲ್ಲಿ ಪಾಲ್ಗೊಳ್ಳಲಿರುವ ವಟುಗಳ ವಿವರಗಳನ್ನು ತಾ.20-04-2009ರ ಒಳಗೆ ಶ್ರೀಶಾರದಾ ಮಂಟಪದ ಮೆನೇಜರ್‌ರಿಗೆ ತಿಳಿಸಲು ಕೋರಲಾಗಿದೆ.

# ಕುಂಜಿಬೆಟ್ಟಿನ ಶ್ರೀಶಾರದಾ ಮಂಟಪದಲ್ಲಿ ಮಹಾಶಿವರಾತ್ರಿ ಆಚರಣೆ



ಒಮ್ಮೆ ಬ್ರಹ್ಮ ಮತ್ತು ಹರಿ ಇವರೊಳಗೆ ನಡೆದ ಚರ್ಚೆ ಮುಂದುವರಿದು ಜಂಜಾಟಕ್ಕೆ ಮಾರ್ಪಟ್ಟಾಗ ಸುಮನಸರು ಶಿವನನ್ನು ಪ್ರಾರ್ಥಿಸಿದಾಗ ಹರನು ಶಿಲಾಸ್ತಂಭದಂತೆ ದೀಪಪ್ರಾಯನಾಗಿ ಪ್ರತ್ಯಕ್ಷನಾಗಿ ಎಲ್ಲರ ಭಯ ನಿವಾರಿಸಿದ. ಎಲ್ಲರ ದುಃಖವನ್ನು ಭಯವನ್ನು ಹೋಗಲಾಡಿಸಿದ ಶಿವನ ಈ ಮಹಿಮೆಯ ಅನಂತರ 'ಮಹಾಶಿವರಾತ್ರಿ' ಲೋಕ ವಿಖ್ಯಾತ ವಾಯಿತು.

ಭಕ್ತನು ತನ್ನ ಮನಸ್ಸಿನಲ್ಲೇ ಭಗವಂತನ ಆರಾಧನೆ ಮಾಡುವ ಕಲ್ಪನೆಯ ಸಾಕಾರವನ್ನು ಆದಿಶಂಕರಾಚಾರ್ಯರು ರಚಿಸಿದ 'ಶಿವ ಮಾನಸ ಪೂಜಾ' ಸ್ತೋತ್ರದಲ್ಲಿ ಹೀಗೆ ಕಾಣಬಹುದು-ರತ್ನಖಚಿತವಾದ ಆಸನವನ್ನು ನಿನಗಾಗಿ ಕಲ್ಪಿಸಿಟ್ಟಿದ್ದೇನೆ. ಹಿಮವತ್ಪರ್ವತದಿಂದ ಹರಿಯುವ ಶುದ್ಧ ನೀರನ್ನು ನಿನ್ನ ಸ್ನಾನಕ್ಕೆಂದು ತಂದಿದ್ದೇನೆ. ನಿನಗೆ ತೊಡಿಸಲು ದಿವ್ಯವಾದ ವಸ್ತ್ರಗಳು ಮತ್ತು ವಜ್ರ ವೈಢೂರ್ಯಾದಿ ಆಭರಣಗಳನ್ನು ಸಜ್ಜುಗೊಳಿಸಿದ್ದೇನೆ. ಅಂಗಲೇಪನಕ್ಕಾಗಿ ಕಸ್ತೂರಿಯ ಸುಗಂಧ ಸೇರಿಸಿದ ಚಂದನ, ಜಾಜಿ ಮಲ್ಲಿಗೆ ಸಂಪಿಗೆಯೇ ಮೊದಲಾದ ಹೂವುಗಳು, ಬಿಲ್ವಪತ್ರೆ, ಧೂಪ, ದೀಪ - ಎಲ್ಲವನ್ನೂ ಹೃತ್ಪೂರ್ವಕವಾಗಿ ನನ್ನ ಹೃತ್ಕಲ್ಪನೆಯಲ್ಲೇ ಸಿದ್ಧಗೊಳಿಸಿದ್ದೇನೆ. ನವರತ್ನಗಳ ಮೆರುಗಿನಿಂದ ಹೊಳೆಯುವ ಬಂಗಾರದ ಬೋಗುಣಿಯಲ್ಲಿ ಪಾಯಸ, ಹಾಲು, ತುಪ್ಪಗಳನ್ನು ಸೇರಿಸಿ ಮಾಡಿದ ಐದು ವಿಧದ ಭಕ್ಷ್ಯಗಳು, ಬಾಳೆಹಣ್ಣಿನ ರಸಾಯನ, ತರಕಾರಿ-ಕಂದ ಮೂಲಗಳಿಂದ ಮಾಡಿದ ರುಚಿಕರ ಪದಾರ್ಥಗಳು, ಕುಡಿಯಲು ಕರ್ಪೂರ ಸುಗಂಧಯುಕ್ತ ಜಲ, ಮೆಲ್ಲಲು ಪರಿಮಳ ದ್ರವ್ಯಭರಿತ ತಾಂಬೂಲ ಇವೆಲ್ಲವೂ ನಿನ್ನ ಸೇವೆಗಾಗಿ. ಅಷ್ಟೆ ಅಲ್ಲ, ವಿಶ್ರಾಂತಿಯ ವೇಳೆ ನಿನ್ನ ಸೇವೆಗಾಗಿ ಛತ್ರ-ಚಾಮರಗಳಿವೆ, ಗಾಳಿಯಾಡಿಸಲು ಬೀಸಣಿಗೆಯಿದೆ. ಮುಖ ದರ್ಶನಕ್ಕೆ ಕನ್ನಡಿಯಿದೆ. ನಿನ್ನ ಮನರಂಜನೆಗೆಂದು ವೀಣೆ-ಮೃದಂಗ-ಢಕ್ಕೆ-ಡಮರುಗಳೊಂದಿಗೆ ಗೀತ ನೃತ್ಯಗೋಷ್ಠಿಯನ್ನೂ ಮಂತ್ರಘೋಷವನ್ನೂ ಆಯೋಜಿಸಿದ್ದೇನೆ. ನಾನು ಭಕ್ತಿಯಿಂದ, ಮನೋಶಕ್ತಿಯಿಂದ ಅರ್ಪಿಸುತ್ತಿರುವ ಇವೆಲ್ಲವನ್ನು ದಯಮಾಡಿ ಸ್ವೀಕರಿಸು. ಶಂಭೋಶಂಕರನೇ ನಿನಗೆ ಸಾಷ್ಟಾಂಗ ವಂದನೆ ಸಮರ್ಪಿಸುತ್ತೇನೆ. ನನ್ನ ಆತ್ಮವೆಂದರೆ ನೀನೇ. ಬುದ್ಧಿಯೇ ಗಿರಿಜೆ. ನನ್ನ ಪಂಚಪ್ರಾಣಗಳು ನಿನ್ನ ಕಿಂಕರರು. ನನ್ನ ಶರೀರ ನಿನ್ನ ಮಂದಿರ. ಇಂದ್ರಿಯ ಭೋಗವೇ ನಿನ್ನ ಪೂಜೆ. ನಿದ್ರೆಯೇ ಸಮಾಧಿ, ನಡಿಗೆಯೇ ಪ್ರದಕ್ಷಿಣೆ. ನನ್ನ ಮಾತುಗಳೆಲ್ಲ ನಿನ್ನದೇ ಸ್ತೋತ್ರವಾದರೆ ನಾನು ಮಾಡುವುದೆಲ್ಲವೂ ನಿನ್ನ ಆರಾಧನೆ.

ಶಿವನಿಗೆ ಆಡಂಬರ ಭಕ್ತಿ ಅವಶ್ಯವಿಲ್ಲ. ಅಂತಃಸತ್ವದ ಅತಿ ಸರಳ ಭಕ್ತಿಯಿಂದ ಶಿವ ಸಂತೃಪ್ತನಾಗುತ್ತಾನೆ. ಇನ್ನು ಬಾಹ್ಯವಾಗಿ ಲಿಂಗವು ಶಿಲಾಮಯವಾಗಿದ್ದರೂ ಅಂತರ್ಯದಲ್ಲಿ ಅಭಿಷೇಕಪ್ರಿಯನಾದ ಶಿವನ ಪ್ರತೀಕ. ಆದ್ದರಿಂದ ಶಿವರಾತ್ರಿ ಜಾಗರಣೆ ಮತ್ತು ಶಿವಲಿಂಗ ಪೂಜೆಯಿಂದ ಪರಮೇಶ್ವರನು ಸರ್ವರಿಗೂ ಜ್ಞಾನ-ಸುಖ-ತೃಪ್ತಿಗಳನ್ನು ಕರುಣಿಸುವ ಪರ್ವಕಾಲ - ಮಹಾಶಿವರಾತ್ರಿ.

ತಾ.23-02-2009ರಂದು ಸೋಮವಾರ ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಬ್ರಹ್ಮಶ್ರೀ ಪಾವಂಜೆ ವಾಸುದೇವ ಉಪಾಧ್ಯಾಯ ಇವರ ನೇತೃತ್ವದಲ್ಲಿ ಬೆಳಗ್ಗೆಯಿಂದ ಏಕಾದಶ ರುದ್ರಾಭಿಷೇಕ, ಪಾರಾಯಣ, ಆರಾಧನೆ, ಭಜನೆ ಮತ್ತು ವಿಶೇಷ ಪೂಜೆಯು ನೆರವೇರಿತು. ಈ ಎಲ್ಲಾ ಸರಳ ಕಾರ್ಯಕ್ರಮಗಳಲ್ಲಿ ಸಮಾಜ ಬಾಂಧವರು ಪಾಲ್ಗೊಂಡು ಶಿವನ ಕೃಪೆಗೆ ಪಾತ್ರರಾಗಿ ಪ್ರಸಾದ ಸ್ವೀಕರಿಸಿದರು. 'ಮಹಾಶಿವರಾತ್ರಿ' ಪೂಜಾ ಸಮಾರಂಭದಲ್ಲಿ ಭಾಗವಹಿಸಿದ ಎಲ್ಲರಿಗೂ ಪ್ರಸನ್ನ ಪರಮೇಶ್ವರನು ಅನುಗ್ರಹಿಸಲಿ ಎಂದು ಸಂಘ ಹಾರೈಸುತ್ತದೆ.

## ಶಿವಮೊಗ್ಗ : 'ಚೆನ್ನಮ್ಮ' ಮಕ್ಕಳ ಐತಿಹಾಸಿಕ ಕಾದಂಬರಿ ಬಿಡುಗಡೆ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ವಾರ್ತಾ ಇಲಾಖೆ, ಶಿವಮೊಗ್ಗ ಇವರ ಸಂಯುಕ್ತ ಆಶ್ರಯದಲ್ಲಿ ಮಾರ್ಪಳ್ಳಿ ಆರ್. ಮಂಜುನಾಥ್ ಇವರು ಬರೆದ 16ನೆಯ ಕೃತಿ-ಕೆಳದಿ ರಾಣಿ ಚೆನ್ನಮ್ಮ-ಮಕ್ಕಳ ಐತಿಹಾಸಿಕ ಕಾದಂಬರಿಯನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾದ ಶ್ರೀ ಡಿ. ಮಂಜುನಾಥ್‌ರವರು ಬಿಡುಗಡೆ ಮಾಡಿದರು. ಡಾ। ಕೆಳದಿ ವೆಂಕಟೇಶ್ ಜೋಯಿಸ್ ಕೃತಿಯ ಬಗ್ಗೆ ಮಾತನಾಡಿ, ಈ ಕೃತಿಯಲ್ಲಿನ ಭಾಷೆಯು ಸರಳ, ಸುಂದರವಾಗಿದ್ದು ಕತೆಯು ಓದಿಸಿಕೊಂಡು ಹೋಗುತ್ತದೆ ಎಂದು ತಿಳಿಸಿದರು.

ಮಾರ್ಪಳ್ಳಿ ಆರ್. ಮಂಜುನಾಥ್‌ರವರು ತಮ್ಮ ಅಭಿಪ್ರಾಯವನ್ನು ಹಂಚಿಕೊಳ್ಳುತ್ತಾ ಕನ್ನಡದ ರಾಣಿ ಚೆನ್ನಮ್ಮ ವೀರೆ-ಧೀರೆ. ಮರಾಠ ರಾಜನಾದ ರಾಜಾರಾಮನಿಗೆ ಆಶ್ರಯ ನೀಡಿ, ಔರಂಗಜೇಬನನ್ನು ಯುದ್ಧದಲ್ಲಿ ಸೋಲಿಸಿ ಹಿಮ್ಮೆಟ್ಟಿಸಿದ ಯಶೋಗಾಥಾ ಇಂದಿನ ಮಕ್ಕಳಿಗೆ ಸ್ಫೂರ್ತಿದಾಯಕ ಎಂದರು.

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಯು. ಅರವಿಂದ ಕುಮಾರ್
ಎಚ್.ಎನ್. ಶ್ಯಾನುಭಾಗ್
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್
ರೂಪಾ ವಸಂತ ರಾವ್
ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ ರಾವ್
ಯು. ಪ್ರಫುಲ್ಲಚಂದ್ರ ರಾವ್



ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಲೇಖನಗಳು ಅಥವಾ ಪತ್ರಿಕೆಯ ಇತರ ಯಾವುದೇ ವಿಷಯಗಳ ಬಗ್ಗೆ ಯಾವುದೇ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.


## ಚಿಂತನ

ಇಂದು ದಿನ ಪತ್ರಿಕೆ ಎತ್ತಿಕೊಂಡಲ್ಲಿ ಅದರಲ್ಲಿ ಆತ್ಮಹತ್ಯೆ ಮಾಡಿ ಕೊಂಡವರ ಬಗ್ಗೆ ಬಹಳಷ್ಟು ಓದುತ್ತೇವೆ. ವಿಷ ಸೇವನೆ, ಹಗ್ಗದಲ್ಲಿ ನೇತು ಬೀಳುವುದು, ಬಾವಿಗೆ ಹಾರಿ ಬಿಡುವುದು... ಮೊದಲಾದವುಗಳೇ ಕಾರಣವಾಗಿ ಆತ್ಮಹತ್ಯೆಗೈಯುತ್ತಿರುವವರ ಬಗ್ಗೆ ಸಾಕಷ್ಟು ಕೇಳುತ್ತಿದ್ದೇವೆ.

ಈ ಆತ್ಮಹತ್ಯೆ ಎನ್ನುವುದು ಇಂದಿನ ಕಾಲದಲ್ಲಿ ಮಾತ್ರ ನಡೆಯುವುದಲ್ಲ. ನಮ್ಮ ಪುರಾಣ, ಚರಿತ್ರೆಗಳಲ್ಲಿಯೂ ತನ್ನನ್ನು ತಾನು ಹತ್ಯೆಗೈದುಕೊಂಡಿರುವ ಪ್ರಸಂಗಗಳೂ ಇವೆ.


ಋಷಿಮುನಿಗಳು ಕಾಡಿನಲ್ಲಿ ತಪಸ್ಸನ್ನು ಆಚರಿಸುತ್ತಾ, ತಮಗೆ ಬೇಕೆಂದಾಗ ತಮ್ಮ ದೇಹತ್ಯಾಗ ಮಾಡುತ್ತಿದ್ದ ಬಗ್ಗೆ ಕಥೆಗಳಿವೆ. ರಾಮಾಯಣದ ಶ್ರೀರಾಮ ನಿರ್ಯಾಣದ ಕಥೆ, ಆಚಾರ್ಯ ಭೀಷ್ಮರು ತಂದೆಯಿಂದ ಇಚ್ಛಾಮರಣಿಯಾಗು ಎಂದು ವರವನ್ನೇ ಪಡೆದು ಮಹಾಭಾರತ ಯುದ ಕಾಲದಲ್ಲಿ ಧರ್ಮಾದಿಗಳ ಪ್ರಾರ್ಥನೆಗೆ ಮಣಿದು "ನಾಳೆ ನಡೆಯುವ ಯುದ್ಧದಲ್ಲಿ ಶಿಖಂಡಿ ಯೊಬ್ಬನನ್ನು ನನ್ನ ಮುಂದೆ ನಿಲ್ಲಿಸು. ಶಸ್ತ್ರತ್ಯಾಗ ಮಾಡುವೆ" ಎಂದು ಹೇಳಿ-ಮುಂದೆ ಉತ್ತರಾಯಣ ಬರುವ ವರೆಗೆ ಕಾದು ಪ್ರಾಣತ್ಯಾಗ ಮಾಡಿದ ಕಥೆ, ಧರ್ಮಜನು ಅನೃತ: ನುಡಿಯಲಾರ ಎಂದು ತಿಳಿದೂ ದ್ರೋಣಾಚಾರ್ಯರು ಪುತ್ರವ್ಯಾಮೋಹದಿಂದ ಯೋಗ ಬಲವನು ಪ್ರಯೋಗಿಸಿ ದೇಹತ್ಯಾಗ ಮಾಡಿ ಸ್ವರ್ಗಾರೋಹಣ ಮಾಡಿದ್ದು, ಗಾಂಧಾರಿಯ ಶಾಪದ ಫಲವಾಗಿ ಶ್ರೀ ಕೃಷ್ಣನು ತನ್ನ ವಂಶದವರಿಂದಲೇ ಸಾವನ್ನು ಬರಮಾಡಿಕೊಂಡದ್ದು, ಭರಧ್ವಾಜ ಮುನಿಯು ತನ್ನ ನಿರಂತರ ತಪೋಬಲ ದಿಂದ ಮೂರು ನೂರು ವರ್ಷಗಳಷ್ಟು ದೀರ್ಘ ಆಯುಸ್ಸನ್ನು ಪಡೆದದ್ದು - ಇವು ಪುರಾಣಗಳ ಕಥೆಯಾದರೆ, ಇತಿಹಾಸದಲ್ಲಿ ಬರುವ 'ಸತಿ ಪದ್ಧತಿ'ಯೂ ಇದಕ್ಕೆ ಉದಾಹರಣೆಯಾಗಬಹುದೇನೋ?

ಒಟ್ಟಿನಲ್ಲಿ ಆತ್ಮಹತ್ಯೆಯೆಂದರೆ ತನ್ನ ದೇವದೊಳಗಿರುವ ಆತ್ಮನನ್ನು ತನಗೆ ಬೇಕೆಂದಾಗ ಮುಕ್ತಿ ಮಾರ್ಗಕ್ಕೆ ತಳ್ಳುವುದೆಂದೂ, ಅದಕ್ಕಾಗಿ ಬಳಸುವ ದಾರಿಗಳು ನಾನಾ ಬಗೆಯಾಗಿರುತ್ತದೆಂದೂ ತಿಳಿದು ಕೊಳ್ಳಬೇಕು.

ಆದರೆ ಹಿಂದೆ ನಡೆದ ಆತ್ಮಹತ್ಯೆಗಳಿಗೆ ಬಹಳಷ್ಟು ನೈತಿಕ ಮೌಲ್ಯಗಳಿದ್ದು ಅವು ಇಂದಿಗೂ ಆದರ್ಶಪ್ರಾಯವಾಗಿದೆ. ಇಂದಿನ ಆತ್ಮಹತ್ಯೆಗಳು ಕೇವಲ ಕ್ಷುಲ್ಲಕ ಕಾರಣಗಳಿಗಾಗಿ ನಡೆದು ಜೀವನದಲ್ಲಿ ಬರುವ ಸಣ್ಣ ಸಮಸ್ಯೆಗಳಿಗೂ ತಾನು ಸ್ಪಂದಿಸಲಾರೆ, ತಡೆದುಕೊಳ್ಳಲಾರೆ ಎಂಬ ಕಾರಣದಲ್ಲಿ ನಡೆಯುತ್ತದೆ. ಅಲ್ಲದೇ ಆತ್ಮಹತ್ಯೆಗೈಯುವೆನೆಂಬ ಕ್ಷಣದ ನಿರ್ಧಾರವನ್ನು ಕೆಲವು ಕ್ಷಣ ತಡೆಹಿಡಿಯಲ್ಪಟ್ಟರೆ ಬಹುಶ: ಆ ತನ್ನ ನಿರ್ಧಾರದಿಂದ ವಿಮುಕ್ತನಾಗಿ ತನ್ನ ಜೀವನದ ಬಗ್ಗೆ ಇದ್ದ ಯೋಚನೆಯನ್ನು ಬದಲಿಸಬಹುದೆಂದು ಅಭಿಪ್ರಾಯಪಡಬಹುದೇ?

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



- ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

**ಪೀಠಿಕೆ**

......ವಸುದೇವನು ದೇವಾಧಿದೇವನಿಗೆ ತಂದೆಯಾಗುವನೆಂದೇ ದೇವತೆಗಳು ಆನಕದುಂದುಭಿಗಳನ್ನು ಮೊಳಗಿಸಿದ್ದು.

೧

ಮಥುರೆ ಅಥವಾ ಮಧುರೆ ಯದು ವಂಶೀಯರ ರಾಜಧಾನಿಯಾಗಿತ್ತು. ಇಲ್ಲಿ ಉಗ್ರಸೇನನು ಆಳುತ್ತಿದ್ದನು. ಅವನ ಮಗನಾದ ಕಂಸನು ತಂದೆಯನ್ನೂ, ಅವನ ಮಂತ್ರಿಗಳನ್ನೂ ಸೇರೆಯಲ್ಲಿಟ್ಟು ತಾನೇ ಅರಸನಾಗಿ ರಾಜ್ಯವಾಳುತ್ತಿದ್ದನು. ಇದೇ ಸಮಯದಲ್ಲಿ ಶೂರನ ಮಗನಾದ ವಸುದೇವನಿಗೂ, ದೇವಕನ ಮಗಳಾದ ದೇವಕಿಗೂ ವಿವಾಹ ನೆರವೇರಿತು. ತನ್ನ ತಂಗಿಯೇ ಆಗಬೇಕಾದ ದೇವಕಿಯಲ್ಲಿ ಕಂಸನಿಗೆ ಬಲು ಅಕ್ಕರೆ. ತಂಗಿಯ ವಿವಾಹವನ್ನು ವೈಭವದಿಂದ ನೆರವೇರಿಸಿದ ಕಂಸನಿಗೆ ದೇವಕಿ, ವಸುದೇವರನ್ನು ನಗರದಲ್ಲಿ ಮೆರವಣಿಗೆಯಲ್ಲಿ ಮೆರೆಸುವ ಆಸೆಯಾಯಿತು. ಅದಕ್ಕಾಗಿ ಒಂದು ಸುಂದರ ಅಲಂಕೃತ ರಥದಲ್ಲಿ ವಧೂ-ವರರನ್ನು ಕೂರಿಸಿ ತಾನೇ ಕುದುರೆಗಳ ಹಗ್ಗವನ್ನು ಹಿಡಿದುಕೊಂಡು ರಥವನ್ನು ನಡೆಸಿದನು. ನಾಗರಿಕರು ದೇವಕಿಯನ್ನೂ, ವಸುದೇವನನ್ನೂ ಕಂಡು ಸಂಭ್ರಮಿಸಿದರು. ಎಲ್ಲೆಲ್ಲೂ ಜಯಘೋಷ ಮೊಳಗಿತು. ಕಂಸನ ಹೆಮ್ಮೆ, ಆನಂದ ಮೇರೆಮೀರಿತು. ಆಗ ಇದ್ದಕ್ಕಿದ್ದಂತೆ ಮೇಘಗಂಭೀರ ಧ್ವನಿಯಲ್ಲಿ ಆಕಾಶವಾಣಿ ಕೇಳಿಸಿತು. ಅದು ಕಂಸನನ್ನು ಕುರಿತು ಹೇಳಿತು. "ಮೂರ್ಖ ಕಂಸ, ನಿನಗೆ ಮೃತ್ಯುವಾಗಲಿರುವ ಮಗನಿಗೆ ಜನ್ಮಕೊಡುವ ದೇವಕಿಯನ್ನು ಮೆರೆಸುತ್ತಿದ್ದೀಯಲ್ಲ! ನಿನ್ನ ಮೌಢ್ಯಕ್ಕೆ ಮಿತಿಯೇ ಇಲ್ಲವೇ? ದೇವಕಿಯ ಎಂಟನೆಯ ಗರ್ಭದಲ್ಲಿ ಹುಟ್ಟುವ ಮಗನು ನಿನ್ನನ್ನು ಕೊಲ್ಲುವನು, ಎಚ್ಚರ".

ಈ ಮಾತನ್ನು ಕೇಳಿದ ಕಂಸನು ಒಂದು ಕ್ಷಣ ವಿದ್ಯುದಾಘಾತವಾದವನಂತೆ ನಿಶ್ಚೇಷ್ಟನಾದನು. ಬಳಿಕ ಅವನ ಆಸುರ ಸ್ವಭಾವ ಎಚ್ಚೆತ್ತುಕೊಂಡಿತು. ಕ್ರೋಧದಿಂದ ಕಂಪಿಸಿದನು. ತತ್‌ಕ್ಷಣ ರಥದಿಂದ ಕೆಳಕ್ಕೆ ಧುಮುಕಿ ಮೆರವಣಿಗೆಯಲ್ಲಿ ಬರುತ್ತಿದ್ದ ಸೈನಿಕನೊಬ್ಬನ ಕೈಯಿಂದ ಖಡ್ಗವನ್ನು ಕಿತ್ತುಕೊಂಡು ರಥವನ್ನೇರಿ ದೇವಕಿಯ ಮುಡಿಯನ್ನು ಹಿಡಿದು ಅವಳ ಕತ್ತನ್ನು ಕತ್ತರಿಸಲು ಮುಂದಾದನು. ದೇವಕಿಯು ದೈನ್ಯವೇ ಮೈವೆತ್ತಂತೆ ಅವನ ಮುಂದೆ ನಿಂತಿದ್ದಳು. ಆಗ ದಿಙ್ಮೂಢನಾಗಿದ್ದ ವಸುದೇವನು ತನ್ನ ಪ್ರತ್ಯುತ್ಪನ್ನಮತಿತ್ವವನ್ನು ಉಪಯೋಗಿಸಿಕೊಂಡು ಕಂಸನ ಮುಂದೆ ಕೈಜೋಡಿಸಿಕೊಂಡು ಹೇಳಿದನು, "ಭಾವ, ಇದೇನು ಅನರ್ಥಮಾಡುತ್ತಿದ್ದೀರಿ? ದೇವಕಿ ನಿಮ್ಮ ತಂಗಿ. ನವವಧು ಬೇರೆ. ಅವಳನ್ನು ಕೊಲ್ಲುವ ಮನಸ್ಸು ನಿಮಗೆ ಹೇಗೆ ಬಂತು? ಅವಳ ಅಪರಾಧವಾದರೂ ಏನು? ಅವಳು ನಿಮ್ಮನ್ನು ಕೊಲ್ಲುವಳೆಂದು ಆಕಾಶವಾಣಿ ಹೇಳಿಲ್ಲವಷ್ಟೆ? ಅವಳಲ್ಲಿ ಹುಟ್ಟುವ ಮಕ್ಕಳನ್ನೆಲ್ಲ ನಿಮ್ಮ ಕೈಗೆ ಒಪ್ಪಿಸುತ್ತೇನೆ. ಅವುಗಳನ್ನು ನಿಮಗಿಷ್ಟಬಂದಂತೆ ಮಾಡಿರಿ, ಅನ್ಯಾಯವಾಗಿ ನಿಮ್ಮ ತಂಗಿಯನ್ನು ಕೊಲ್ಲಬೇಡಿರಿ". ಕಂಸನಿಗೂ ಇದು ಸರಿಯೆಂದು ಅನಿಸಿತು. ಮೆರವಣಿಗೆಯನ್ನು ನಿಲ್ಲಿಸಿ ದೇವಕಿ, ವಸುದೇವರನ್ನು ಹೋಗಲು ಬಿಟ್ಟನು. ತಾನು ತನ್ನರಮನೆಗೆ ತೆರಳಿದನು. ನಾಗರಿಕರು ದೊಡ್ಡ ಗಂಡಾಂತರ ತಪ್ಪಿತೆಂದು ಸಮಾಧಾನದ ನಿಟ್ಟುಸಿರುಬಿಟ್ಟರು.

ಕಾಲ ಕಳೆದಂತೆ ದೇವಕಿಯು ಗರ್ಭ ಧರಿಸಿದಳು. ನವಮಾಸ ತುಂಬುತ್ತಲೆ ಗಂಡು ಮಗುವಿಗೆ ಜನ್ಮಕೊಟ್ಟಳು. ವಸುದೇವನು ಆ ಶಿಶುವನ್ನು ಕಂಸನಿಗೆ ಒಪ್ಪಿಸಿದನು. ಅದನ್ನು ಕಂಡು ಕಂಸನ ಮನಸ್ಸು ಕರಗಿತು. ಅವನೆಂದನು "ವಸುದೇವ ನನಗೆ ಅಪಾಯವಿರುವುದು ಎಂಟನೆಯ ಶಿಶುವಿನಿಂದ. ಆದುದರಿಂದ ಈ ಮಗುವನ್ನು ಕೊಂದು ನಾನೇಕೆ ನರಕಕ್ಕೆ ಹೋಗಲಿ? ನೀವು ಎಂಟನೆಯ ಶಿಶುವನ್ನು ತಂದೊಪ್ಪಿಸಿದರೆ ಸಾಕು. ಈಗ ಹೋಗಿ". ವಸುದೇವ ಸಂತೋಷಭರಿತನಾಗಿ ತನ್ನ ನಿವಾಸಕ್ಕೆ ಹೋದನು.

ಅದೇ ಸಮಯದಲ್ಲಿ ನಾರದರು ಕಂಸನ ಅರಮನೆಗೆ ಬಂದರು. ಅವರೆಂದರು "ರಾಜನೇ, ವಿಷ್ಣುವೇ ಮೊದಲಾದ ದೇವತೆಗಳು ನಿನ್ನನ್ನು ಮುಗಿಸುವ ಸಂಚು ರೂಪಿಸಿದ್ದಾರೆ. ದೇವತೆಗಳು ಆಗಲೇ ಭೂಮಿಯ ಮೇಲೆ ಅವತರಿಸಿದ್ದಾರೆ. ಯಾವ ರೂಪದಲ್ಲಿ ಬಂದಿದ್ದಾರೋ ತಿಳಿಯುವುದಿಲ್ಲ. ಅಂತು ನೀನು ಎಚ್ಚರದಿಂದಿರುವುದು ಕ್ಷೇಮ. ಇಷ್ಟು ಹೇಳಿ ದೇವರ್ಷಿಗಳು ನಿರ್ಗಮಿಸಿದರು. ಕಂಸನು ಭಯ, ಕ್ರೋಧಗಳಿಂದ ಹುಚ್ಚನೇ ಆದನು. ಕೂಡಲೆ ವಸುದೇವ-ದೇವಕಿಯರನ್ನು ಸೆರೆಮನೆಗೆ ತಳ್ಳಿದನು. ಅವರ ಮಗುವನ್ನು ಕಾಲಲ್ಲಿ ಹಿಡಿದುಕೊಂಡು ಕಲ್ಲಿಗೆ ಬಡಿದು ಕೊಂದೇ ಬಿಟ್ಟನು. ವಸುದೇವ-ದೇವಕಿಯರ ಗೋಳು ಅರಣ್ಯರೋದನವಾಯಿತು. ಈ ರೀತಿ ಕಂಸನಿಂದ ಆರುಮಕ್ಕಳ ಕಗ್ಗೊಲೆಯಾಯಿತು.

ದೇವಕಿಯು ಏಳನೆಯ ಬಾರಿ ಗರ್ಭ ಧರಿಸಿದಳು. ಮಹಾಶೇಷನ ಅಂಶವೇ ಗರ್ಭವನ್ನು ಪ್ರವೇಶಿಸಿತು. ಆಗ ಶ್ರೀಹರಿಯು ತನ್ನ ಯೋಗಮಾಯೆಗೆ ಆದೇಶವನ್ನಿತ್ತನು, ದೇವಿ, ದೇವಕಿಯ ಗರ್ಭದಲ್ಲಿರುವ ಶಿಶುವನ್ನು ಉಳಿಸಬೇಕಾಗಿದೆ. ನೀನೀಗಲೆ ಮಧುರೆಗೆ ಹೋಗಿ ದೇವಕಿಯ ಗರ್ಭದಿಂದ ಆ ಶಿಶುವನ್ನು ಸೆಳೆದುಕೊಂಡು ವ್ರಜ ಭೂಮಿಗೆ ಹೋಗಿ ಅಲ್ಲಿ ಕಂಸನ ಭಯದಿಂದ ನಂದಗೋಪನ ಮನೆಯಲ್ಲಿ ಅಡಗಿಕೊಂಡಿರುವ ವಸುದೇವನ ಪತ್ನಿಯಾದ ರೋಹಿಣಿಯ ಗರ್ಭದಲ್ಲಿರಿಸು. ನಾನು ದೇವಕಿಯ ಗರ್ಭವನ್ನು ಸೇರಿ ಹುಟ್ಟಲಿರುವೆನು. ನಿನ್ನನ್ನು ಜನರು ದುರ್ಗೆ, ಕಾಳಿ ಎಂದು ಮುಂತಾದ ಹೆಸರಿನಿಂದ ಆರಾಧಿಸುವರು. ದೇವಕಿಯ ಗರ್ಭದಿಂದ ಸೆಳೆದ ಕಾರಣ ಮಹಾಶೇಷನ ಅವತಾರಕ್ಕೆ ಸಂಕರ್ಷಣ ಎಂಬ ಹೆಸರೂ ಬರುತ್ತದೆ."

(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು)

## ಹೊಸ ಬೆಳಕು

**ನಲ್ನುಡಿ :**

**ಅವತು ಮಾಂ ಅವತು ವಕ್ತಾರಂ**

ಅಂದರೆ ನನ್ನನ್ನು ರಕ್ಷಿಸು ಹೇಳುವವನನ್ನು ರಕ್ಷಿಸು.

**ಪುಸ್ತಕ ಪರಿಚಯ :**

ತುಳುನಾಡಿನ ಸ್ಥಾನಿಕ ಬ್ರಾಹ್ಮಣರು
ಲೇಖಕರು : ವಿ. ಆರ್. ಉದ್ಯಾವರ್

ಕಳೆದ ಸಂಚಿಕೆಯಲ್ಲಿ ಈ ಅಂಕಣದಲ್ಲಿ "ತುಳುನಾಡಿನ ಸ್ಥಾನಿಕ ಬ್ರಾಹ್ಮಣರು" ಪುಸ್ತಕದ ಬಗ್ಗೆ ಸಂಕ್ಷಿಪ್ತವಾಗಿ ಮಾಹಿತಿಯನ್ನು ನೀಡಲಾಗಿತ್ತು. ಹೇಳದೆ ಉಳಿದ ಕೆಲವು ಅಂಶಗಳನ್ನು ಈಗ ತಿಳಿಯೋಣ.

ಸ್ಥಾನಿಕರ ಹುಟ್ಟು ಹಾಗೂ ಬೆಳವಣಿಗೆ ಬಗ್ಗೆ ವಿ. ಆರ್. ಉದ್ಯಾವರ್ ಹೀಗೆ ಬರೆಯುತ್ತಾರೆ - ಸ್ಥಾನಿಕ ಬ್ರಾಹ್ಮಣರು ಗೋಕರ್ಣದಿಂದ ಕಾಸರಗೋಡಿನ ವರೆಗೆ ಆವರಿಸಿದ ತುಳುನಾಡಿನಲ್ಲಿ ಪ್ರಪ್ರಥಮವಾಗಿ ವಲಸೆ ಬಂದ ಹಾಗೂ ಇಲ್ಲಿಯ ಆಡಳಿತ ಸೂತ್ರವನ್ನು ಕೈಯಲ್ಲಿ ಹಿಡಿದು ವೈದಿಕ ಶೈವಧರ್ಮವನ್ನು ಪ್ರವರ್ತಿಸಿ ಸಮಾಜದ ಹಿತಕ್ಕಾಗಿ ಶಿವಾಲಯಗಳನ್ನು ಸ್ಥಾಪಿಸಿದ ಬ್ರಾಹ್ಮಣರಾದ್ದರಿಂದ ಪ್ರಾದೇಶಿಕವಾಗಿ ತುಳು ಬ್ರಾಹ್ಮಣರು ಮತ್ತು ಇಲ್ಲಿ ಸಣ್ಣ ದೊಡ್ಡ ಎಲ್ಲಾ ರಾಜ್ಯಗಳ ಆಡಳಿತದಲ್ಲಿ ಕೌಳಿಗೆ (ಪ್ರಧಾನಿ), ಬೊಕ್ಕಸ (ಅರ್ಥ ಸಚಿವ), ಶ್ಯಾನುಭಾಗ, ಅಧಿಕಾರಿ, ಕರ್ಣಿಕ, ದಿವಾನ ಇತ್ಯಾದಿ ಅಧಿಕಾರ ಸ್ಥಾನಗಳಲ್ಲಿದ್ದುದರಿಂದ ಮತ್ತು ಪ್ರಾಚೀನ ದೇವಸ್ಥಾನಗಳ ಅಧಿಕಾರಿಗಳೂ ಆಗಿದ್ದರಿಂದ ವೃತ್ತಿ ಮೂಲಕವಾಗಿ ಸಾನಿಕ ಬ್ರಾಹ್ಮಣರೆಂದು ವ್ಯವಹೃತರಾದರು. ಇದು ಸಮರ್ಪಕವಾಗಿದೆ.

ಪಾದೂರು ಗುರುರಾಜ ಭಟ್ ಅವರು ರಚಿಸಿದ ತುಳುನಾಡಿನ ಇತಿಹಾಸದಲ್ಲಿ ಸ್ಥಾನಿಕರು ಎಂಬ ಪುಸ್ತಕದ ಮೊದಲ ಆವೃತ್ತಿಯ ಮುನ್ನುಡಿಯಲ್ಲಿ ಪ್ರಿನ್ಸಿಪಾಲ್ ಕು.ಶಿ.ಹರಿದಾಸ ಭಟ್ಟರು ಬರೆದ ಈ ಮಾತು ಗಮನಾರ್ಹವಾದದ್ದು - "ಸ್ಥಾನಿಕರು ಯಾರು? ಅವರು ಮೂಲತಃ ನಮ್ಮ ದೇವಸ್ಥಾನದಲ್ಲಿ ಯಾವ ಅಧಿಕಾರವನ್ನು ಹೊಂದಿದ್ದರು ಎಂಬ ಬಗ್ಗೆ ಶಾಸನ ಆಧಾರದ ಮೇಲಿಂದ ಶ್ರೀ ಪಾದೂರು ಗುರುರಾಜ ಭಟ್ಟರು ಚರ್ಚಿಸುವ ಯತ್ನವನ್ನು ಈ ಗ್ರಂಥದಲ್ಲಿ ಮಾಡಿದ್ದಾರೆ. ಕೇವಲ ಐತಿಹಾಸಿಕ ಸತ್ಯದ ಶೋಧನೆಯೊಂದೇ ಅವರ ಗುರಿಯಾಗಿರುವುದರಿಂದ ಅವರ ನಿರ್ಣಯಗಳನ್ನು ಒಪ್ಪಿಕೊಳ್ಳಲು ಗುಣಗ್ರಾಹಿಗಳಿಗೆ ಕಷ್ಟವಾಗಲಾರದು, ಆಗಬಾರದು".

ಆದ್ದರಿಂದ ವಿ. ಆರ್. ಉದ್ಯಾವರ್ ಇವರು ಬರೆದ ಪುಸ್ತಕ-'ತುಳುನಾಡಿನ ಸ್ಥಾನಿಕ ಬ್ರಾಹ್ಮಣರು' ಮತ್ತು ಪಾದೂರು ಗುರುರಾಜ ಭಟ್ ಇವರು ಬರೆದ ಪುಸ್ತಕ-'ತುಳುನಾಡಿನ ಇತಿಹಾಸದಲ್ಲಿ ಸ್ಥಾನಿಕರು' ಸ್ಥಾನಿಕರ ಸ್ಥಾನಮಾನದ ಕುರಿತು ಹೊಸ ಬೆಳಕನ್ನು ಬೀರಿವೆ. ಈ ಎರಡು ಅತ್ಯಮೂಲ್ಯ ಪುಸ್ತಕಗಳ ವಿಳಾಸಗಳನ್ನು ಸಮಾಜ ಬಾಂಧವರ ಕೋರಿಕೆ ಮೇರೆಗೆ ಇಲ್ಲಿ ನೀಡಲಾಗಿದೆ.


**"ತುಳುನಾಡಿನ ಇತಿಹಾಸದಲ್ಲಿ ಸ್ಥಾನಿಕರು"**
ಲೇಖಕರು : ಪಾದೂರು ಗುರುರಾಜ ಭಟ್
ಬೆಲೆ : ರೂ.60/-
ದ್ವಿತೀಯ ಮುದ್ರಣದ ಪ್ರಕಾಶಕರು :
ಶತಮಾನೋತ್ಸವ ಸಮಿತಿ,
ಶ್ರೀ ಸುಬ್ರಹ್ಮಣ್ಯ ಸಭಾ (ರಿ.),
ಕುಡ್ಪಿಪದ್ಮನಾಭಯ್ಯ ಗಾರ್ಡನ್ಸ್,
ಬಿಜೈರಸ್ತೆ, ಕರಂಗಲ್ಪಾಡಿ, ಮಂಗಳೂರು-3.

**"ತುಳುನಾಡಿನ ಸ್ಥಾನಿಕ ಬ್ರಾಹ್ಮಣರು"**
ಪ್ರಕಾಶಕರು : ಎಸ್.ಎಸ್. ಉದ್ಯಾವರ್
ಬೆಲೆ : ರೂ.20/-
ಮಂಜುನಿಕೇತನ, 1528, 9ನೇ ಮುಖ್ಯರಸ್ತೆ,
'ಎ' ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ,
ಬೆಂಗಳೂರು-560 010.

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ.

# ವಾಚಸ್ಪತಿ ಶ್ರೀ ಕುರಯ ಆತ್ಮಾರಾಮ ಶಾಸ್ತ್ರೀ



**ವಾಚಸ್ಪತಿ ಶ್ರೀ ಕುರಯ ಆತ್ಮಾರಾಮ ಶಾಸ್ತ್ರಿಯವರು ಶ್ರೀಶಾರದಾ ಪತ್ರಿಕೆಗೆ ನಿರಂತರವಾಗಿ ಲೇಖನಗಳನ್ನು ನೀಡಿ ಪತ್ರಿಕೆಯ ಜನಪ್ರಿಯತೆಗೆ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ. ಇವರ ಅನೇಕ ಲೇಖನಗಳು ಪ್ರತ್ಯೇಕ ಓದುಗರ ಗುಂಪನ್ನು ಸೃಷ್ಟಿಸಿ ಜನರನ್ನು ಧಾರ್ಮಿಕವಾಗಿ ಹಾಗೂ ವೈಚಾರಿಕವಾಗಿ ಯೋಚಿಸುವಂತೆ ಪ್ರೇರೇಪಿಸಿವೆ. ಕಳೆದ ಸಂಚಿಕೆಯಲ್ಲಿ ಇವರ ಲೇಖನ 'ಶ್ರೀ ಕೃಷ್ಣಾಯನ' ಪೀಠಿಕೆಯೊಂದಿಗೆ ಪ್ರಕಟವಾಗಿದೆ. ಕಥಾ ಭಾಗವು ಇನ್ನು ಹಲವು ಕಂತುಗಳಲ್ಲಿ ಪತ್ರಿಕೆಯಲ್ಲಿ ಪ್ರಕಟವಾಗುತ್ತದೆ. ನಮ್ಮ ಸಮಾಜದವರು ಹೊರತರುತ್ತಿರುವ ಪತ್ರಿಕೆಗಳಲ್ಲಿ 'ಶ್ರೀಶಾರದಾ' ಸಾರ್ಥಕವಾಗಿ ಮುಂಚೂಣಿಯಲ್ಲಿ ನಿಲ್ಲುತ್ತದೆ ಮತ್ತು ಇದನ್ನು ಇನ್ನೂ ಸರ್ವಾಂಗ ಸುಂದರಗೊಳಿಸಲು ಅವಕಾಶವಿದೆ ಎಂದು ಶ್ರೀ ಕುರಯ ಆತ್ಮಾರಾಮ ಶಾಸ್ತ್ರಿಯವರು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಇವರಿಗೆ ಪ್ರೀತ್ಯಾದರಗಳೊಂದಿಗೆ ಕೃತಜ್ಞತೆಗಳು.**

**-ಸಂಪಾದಕ ಮಂಡಳಿ**

ದೇವಭಾಷೆ ಸಂಸ್ಕೃತವನ್ನೇ ಉಸಿರಾಗಿಸಿ, ಬದುಕಿನುದ್ದಕ್ಕೂ ಸಂಸ್ಕೃತ ಭಾಷೆ, ಸಾಹಿತ್ಯ, ವೇದಾಧ್ಯಯನ ಇತ್ಯಾದಿಗಳ ಪ್ರಸಾರವೇ ಜೀವನದ ಉದ್ದೇಶವೆಂದು ತಿಳಿದು ನಿರಂತರ ಅದಕ್ಕಾಗಿ ದುಡಿಯುತ್ತಿರುವವರು ಶ್ರೀ ಕುರಯ ಆತ್ಮಾರಾಮ ಶಾಸ್ತ್ರಿಗಳು. ಸುಪ್ರಸಿದ್ಧ ವೈದಿಕರಾದ ವೇದಮೂರ್ತಿ ಶ್ರೀ ಕುರಯ ನಾರಾಯಣಾಚಾರ್ಯರ ಪುತ್ರ ಸುಪ್ರಸಿದ್ಧ ವೈದಿಕರಾದ ವೇದಮೂರ್ತಿ ಶ್ರೀ ರಾಮಕೃಷ್ಣ ಶಾಸ್ತ್ರಿ ಮತ್ತು ಪರಮೇಶ್ವರಿ ದಂಪತಿಗಳ ಸುಪುತ್ರರಾಗಿ 1933ರಲ್ಲಿ ಜನಿಸಿದ ಆತ್ಮಾರಾಮ ಶಾಸ್ತ್ರಿಯವರು ಪ್ರಾಥಮಿಕ ಶಿಕ್ಷಣದ ಬಳಿಕ ಉಡುಪಿಯ ಸಂಸ್ಕೃತ ಕಾಲೇಜಿನಿಂದ 'ಸಾಹಿತ್ಯ ಶಿರೋಮಣಿ' ಉಪಾಧಿಯನ್ನು ಗಳಿಸಿದರು. ಮುಂದೆ ಕೇಂದ್ರ ಸರಕಾರದ ವಿದ್ಯಾರ್ಥಿ ವೇತನವನ್ನು ಪಡೆದು ಮುಂಬಯಿಯ ಭಾರತೀಯ ವಿದ್ಯಾಭವನದಲ್ಲಿ ಮೂರು ವರ್ಷಗಳ ಕಾಲ ವ್ಯಾಸಂಗ ನಡೆಸಿ ''ಸಾಹಿತ್ಯ ಶಾಸ್ತ್ರೇ ಅನ್ಯ ಶಾಸ್ತ್ರಾಣಾಂ ಪ್ರಭಾವ'' ಎಂಬ ವಿಷಯದ ಪ್ರೌಢ ಪ್ರಬಂಧಕ್ಕಾಗಿ ವಾಚಸ್ಪತಿ (ಪಿ.ಹೆಚ್.ಡಿ.) ಪದವಿ ಗಳಿಸಿ ಸಾಧನೆಗೈದವರು. ಭಾರತೀಯ ವಿದ್ಯಾಭವನದ ಮುಂಬಾದೇವಿ ಸಂಸ್ಕೃತ ಕಾಲೇಜಿನಲ್ಲೂ ಮುಂದೆ ಬೆಂಗಳೂರಿನಲ್ಲೂ ಸಂಸ್ಕೃತ ಉಪನ್ಯಾಸಕರಾಗಿ ಸಂಸ್ಕೃತ ಅಧ್ಯಯನ, ಪ್ರಸಾರಗಳಿಗೆ ಅಮೂಲ್ಯವಾದ ಕೊಡುಗೆಗಳನ್ನು ನೀಡಿದರು. ಭಾರತೀಯ ವಿದ್ಯಾಭವನದ ತ್ರೈಮಾಸಿಕ ''ಸಂವಿದ್'' ಪತ್ರಿಕೆಯ ಉಪಸಂಪಾದಕರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

ನಿವೃತ್ತಿಯ ಬಳಿಕ ಸುಳ್ಯದ ಅಜ್ಜಾವರದಲ್ಲಿ ಶ್ರೀಶಾರದಾ ರಾಮ ಸೇವಾ ಪ್ರತಿಷ್ಠಾನ, ಶ್ರೀ ಶಂಕರ ಭಾರತೀ ಪಾಠಶಾಲೆ ಇವುಗಳ ನೇತೃತ್ವ ವಹಿಸಿ ವೈದಿಕ ಶಿಬಿರಗಳು, ವಸಂತ ವೇದ ಶಿಬಿರಗಳು ಇತ್ಯಾದಿಗಳ ಮೂಲಕ ಪ್ರಶಂಸನೀಯವಾದ ಸೇವೆಯನ್ನು ಮಾಡಿದ್ದಾರೆ. ಶಂಕರಭಾರತೀ ಪಾಠಶಾಲೆಯಲ್ಲಿ ಪ್ರತಿ ಆದಿತ್ಯವಾರ ನಡೆಯುವ ವೇದಾಧ್ಯಯನ ಶಿಬಿರವೂ ಉಲ್ಲೇಖನೀಯ.

ತಲೇಕಿ ಶ್ರೀ ಶ್ರೀನಿವಾಸ ಸುಪ್ರಭಾತ, ಕಡಬ ಶ್ರೀ ಗಣಪತಿ ಸುಪ್ರಭಾತ, ಋಗ್ವೇದೀಯ ಸಂಧ್ಯಾವಂದನೆ ಮತ್ತು ದೇವರ ಪೂಜೆ, ಸಂಸ್ಕಾರ ಸಂಗ್ರಹ ಮುಂತಾದ ಜನಪ್ರಿಯ ಕೃತಿಗಳನ್ನೂ ಆತ್ಮಾರಾಮ ಶಾಸ್ತ್ರಿಯವರು ರಚಿಸಿದ್ದಾರೆ. ಸಾಕ್ರೆಟಿಸ್ ಮತ್ತು ಕಿಸಾಗೌತಮಿ ಎಂಬೆರಡು ನಾಟಕಗಳನ್ನೂ ಸಂಸ್ಕೃತಕ್ಕೆ ಅನುವಾದಿಸಿದ್ದು ಅವುಗಳು ಹಲವೆಡೆಗಳಲ್ಲಿ ಪ್ರದರ್ಶನ ಕಂಡಿವೆ. ಉದಯವಾಣಿ, ಹೊಸದಿಗಂತಗಳಲ್ಲಿ ಧಾರ್ಮಿಕ ಜಿಜ್ಞಾಸೆಗೆ ಸಂಬಂಧಿಸಿ ಇವರು ಬರೆಯುತ್ತಿದ್ದ ಅನೇಕ ಲೇಖನಗಳು ತುಂಬ ಅರ್ಥವತ್ತಾಗಿ ಜನಪ್ರಿಯತೆಯನ್ನು ಗಳಿಸಿವೆ.

ಶ್ರೀ ಆತ್ಮಾರಾಮ ಶಾಸ್ತ್ರಿಗಳ ವಿದ್ವತ್ತು ಮತ್ತು ಸೇವೆಯನ್ನು ಗಮನಿಸಿ ಹಲವು ಸಂಘ ಸಂಸ್ಥೆಗಳು ಅವರನ್ನು ಸನ್ಮಾನಿಸಿ ಗೌರವಿಸಿವೆ. ಈ ಹಿರಿಯ ವಿದ್ವಾಂಸರಿಗೆ ನಮ್ಮ ಗೌರವಪೂರ್ವಕ ನಮನಗಳು.

**ಕೃಪೆ : ಶ್ರೀ ಸುಬ್ರಹ್ಮಣ್ಯ ಸಭೆಯ ಶತಮಾನೋತ್ಸವ ಸಭೆಯ ಆಚರಣೆಯ ಸಂದರ್ಭದಲ್ಲಿ ಸನ್ಮಾನಗೊಂಡಾಗ.**

# ನಾ ಕಂಡ ಅಮೇರಿಕಾ

**- ಶ್ರೀಮತಿ ಸುಶೀಲಾ ಸುಬ್ಬರಾವ್**

ಮಾರ್ಚ್ ತಾ.2ರಂದು ನಮ್ಮ ಮನೆ ''ಓಂಕಾರ ಸದನ''ದಿಂದ ಹೊರಟು ಬೆಂಗಳೂರಿನಲ್ಲಿರುವ ಹಿರಿ ಮಗನ ಮನೆಯಲ್ಲಿದ್ದು ಮಾರ್ಚ್ 3ರಂದು ಮುಂಜಾನೆ 3 ಗಂಟೆಗೆ ಏರ್‌ಫ್ರಾನ್ಸ್ ಫ್ಲೈಟನ್ನು ಹತ್ತಿ ಪ್ಯಾರೀಸ್ ತನಕ 10 ಗಂಟೆ ಪ್ರಯಾಣ ಮಾಡಿದೆ. ಆಮೇಲೆ ಪ್ಯಾರೀಸಿನಿಂದ ಅಟ್ಲಾಂಟದ ವರೆಗೆ 10 ಗಂಟೆ ಪ್ರವಾಸ. ಅದೃಷ್ಟವಶಾತ್ ಆ ವಿಮಾನದಲ್ಲಿ 3 ಸೀಟು ಖಾಲಿ ಇತ್ತು, ಹಾಗಾಗಿ ಆರಾಮದಲ್ಲಿ ಮಲಗಿಕೊಂಡೇ ಹೋಗುವಂತಾಯ್ತು. ಪುನಃ ಅಟ್ಲಾಂಟದಿಂದ 3 ಗಂಟೆ ಪ್ರಯಾಣ ಮಾಡಿ ವಿಮಾನದಲ್ಲಿ ಟೆಕ್ಸಾಸ್ ರಾಜ್ಯದಲ್ಲಿರುವ ನಗರ ಆಸ್ಟಿನ್‌ಗೆ ಬಂದು ತಲುಪಿದೆವು. ಅಲ್ಲಿ ಮಗ ಪ್ರಶಾಂತ್, ಸೊಸು ಸಂಧ್ಯಾ ಹಾಜರಿದ್ದು ಅವರ ಮನೆಗೆ ತೆರಳಿ ವಿಶ್ರಾಂತಿ ಪಡೆದೆವು.

ಇಲ್ಲಿ ಚಿಲಿಪಿಲಿಗುಟ್ಟುವ ಹಕ್ಕಿಗಳ ಸದ್ದಾಗಲಿ, ಮೃಗ, ಪಕ್ಷಿ, ಪ್ರಾಣಿಗಳ ಸದ್ದಾಗಲಿ, ವಾಹನಗಳ ಗಲಾಟೆಯಾಗಲಿ, ಮಗು ಅಳುವ ಸದ್ದುಗಳಾಗಲಿ ಕೇಳಿ ಬರುತ್ತಿಲ್ಲ. ಬಹಳ ಪ್ರಶಾಂತವಾದ ದೇಶ. ಇಲ್ಲಿ ನಡೆದುಕೊಂಡು ಹೋಗುವವರೇ ಕಡಿಮೆ. ಅಪರೂಪವಾಗಿ ವಾಕಿಂಗ್ ಮಾಡುವುದನ್ನು ಕಾಣಬಹುದಷ್ಟೆ.

ಈ ದೇಶದಲ್ಲಿ ಲಕ್ಷಗಟ್ಟಲೆ ಕಾರುಗಳೂ, ಅಗಲವಾದ ಚತುಷ್ಪಥ ರಸ್ತೆಗಳು ಇವೆ. ಕಾಡನ್ನು ಕಡಿದು ಮಾಡಿದಂತಹ ನಾಡಿನಲ್ಲಿ ಇಟ್ಟಿಗೆ ಮತ್ತು ಮರದಿಂದಲೆ ಕಟ್ಟಿದ ಅಲಂಕೃತವಾದ ಮನೆಗಳನ್ನೂ, ನೋಡಲು 2 ಕಣ್ಣು ಸಾಲದೆಂಬಂತಿದೆ. ಇಲ್ಲಿ ಜನರು ದಾರಿಯಲ್ಲಿ ಎದುರು ಸಿಗುವಾಗ ವಿನಮ್ರತೆಯಿಂದ ನಕ್ಕು ಹೇಗಿದ್ದೀರಾ ಎಂದು ಕೇಳಿ ಮುಂದುವರೆಯುತ್ತಾರೆ. ಇಲ್ಲಿಯ ಜನರು ಯಾರಿಗೂ ಭಾರವಾಗದೆ ಇರುವ ಸ್ವಾವಲಂಬಿಗಳು. ಇಲ್ಲಿ ಮಕ್ಕಳಿಗೆ ತಂದೆ ತಾಯಿಯರೂ, ಇತರರೂ ಕೂಡಾ ಹೊಡೆಯುವ ಹಾಗಿಲ್ಲ, ಮಗು ಶಾಲೆಯಲ್ಲಿ ತಪ್ಪು ಮಾಡಿದರೆ ತಂದೆ ತಾಯಿಯನ್ನು ಕರೆಸಿ ಅವರಿಗೆ ಎಚ್ಚರಿಕೆ ನೀಡುತ್ತಾರೇ ವಿನಹ ಮಕ್ಕಳಿಗೆ ಶಿಕ್ಷೆಯಿಲ್ಲ. ಯಾಕೆಂದರೆ ಮಗುವಿನ ಎಲ್ಲಾ ನಡತೆಗೂ ತಂದೆ ತಾಯಿಗಳೇ ಜವಾಬ್ದಾರಿ. 18 ವರ್ಷ ತನಕ ಮಕ್ಕಳ ಜವಾಬ್ದಾರಿ ತಂದೆ ತಾಯಿಯವರದ್ದು. ಆಮೇಲೆ ಮಕ್ಕಳು ತಂದೆ ತಾಯಿ ಜೊತೆಯಿರುವುದಿಲ್ಲ, ಪ್ರಾಯಕ್ಕೆ ಬಂದ ಹುಡುಗ-ಹುಡುಗಿಯರು ಮದುವೆ ಆಗಲೇ ಬೇಕೆಂದೇನಿಲ್ಲ, ಅವರವರ ಇಚ್ಛೆ ಪ್ರಕಾರ ಯಾರೊಬ್ಬ ಇಷ್ಟಪಟ್ಟವನ ಜೊತೆ ಜೀವನ ಮಾಡಬಹುದು. ವಿರಸ ಬಂದಲ್ಲಿ ಅವರಿಂದ ಬಿಡುಗಡೆಯಾಗಬಹುದು. ಯಾವತ್ತೂ ಒಬ್ಬ ಸಂಗಾತಿಯೊಡನೆ ಮಾತ್ರ ಇರಬೇಕು. ಇದು ಇಲ್ಲಿಯ ನಿಯಮ.

ಇಲ್ಲಿಯ ಪೋಲೀಸರು ನಿಜವಾದ ಆರಕ್ಷಕರು. ಕಷ್ಟ ಬಂದಲ್ಲಿ ಯಾವ ನಾಗರಿಕನೂ ಕೂಡಾ 911 ನಂಬರಿಗೆ ಕರೆ ಮಾಡಿದರೆ 5 ನಿಮಿಷದಲ್ಲಿ ಕರೆದಲ್ಲಿಗೆ ಪೋಲೀಸರು ಬರುತ್ತಾರೆ. ಅಪಘಾತವೇ ಆಗಲಿ, ಮನೆಗೆ ಕಳ್ಳನೆ ಬರಲಿ, ಅಥವಾ ಯಾರದ್ದೇ ಆರೋಗ್ಯ ಕೆಟ್ಟರಲಿ ಪೋಲೀಸರು ಅದಕ್ಕೆ ವ್ಯವಸ್ಥೆ ಮಾಡುತ್ತಾರೆ. ಮಕ್ಕಳು ಕೂಡಾ ಯಾವತ್ತೂ ಪೋಲೀಸನ್ನು ಕರೆಯಬಹುದು. ತಂದೆ ತಾಯಿ ಹೊಡೆಯುತ್ತಾರೆ ಎಂದು ಮಕ್ಕಳು ಪೋಲೀಸಿಗೆ ದೂರು ಕೊಟ್ರೆ ತಂದೆ-ತಾಯನ್ನೇ ಜೈಲಿಗೆ ಹಾಕುತ್ತಾರೆ. ಆ ಸಂದರ್ಭದಲ್ಲಿ ಸರ್ಕಾರವೆ ಮಕ್ಕಳನ್ನು ನೋಡಿಕೊಳ್ಳುತ್ತದೆ. ತಂದೆ ತಾಯಿಗೆ ಮಕ್ಕಳನ್ನು ಹೊಡೆಯದೆ ಸಲಹಲು ಸಾಧ್ಯವಿದೆಯೇ ಎಂದು ಪರೀಕ್ಷೆ ಮಾಡಿದ ನಂತರ ತಂದೆ ತಾಯಿಯನ್ನು ಜೈಲಿಂದ ಬಿಡುಗಡೆ ಮಾಡಿ ಮಕ್ಕಳನ್ನು ಅವರಿಗೆ ಒಪ್ಪಿಸುತ್ತಾರೆ. ಇಂಡಿಯದಿಂದ ಬಂದ ಕನ್ನಡಿಗರೆಲ್ಲ ಒಂದಾಗಿ ಮಕ್ಕಳ ಬರ್ತ್‌ಡೇ ತುಂಬ ವಿಜೃಂಭಣೆಯಿಂದ ಮಾಡುತ್ತಾರೆ. ದೇವರಿಗೆ ಪೂಜೆ ಮಾಡಿದ ಬಳಿಕ ಕೇಕ್ ಕತ್ತರಿಸಿ ಹಂಚುತ್ತಾರೆ. ಇಲ್ಲಿ ಜನ ಮಕ್ಕಳನ್ನು ಮತ್ತು ನಾಯಿಗಳನ್ನು ಪ್ರೀತಿಯಿಂದ ಸಾಕುತ್ತಾರೆ. ಅಮೇರಿಕನ್ನರು ನಿಸರ್ಗ ಪ್ರೇಮಿಗಳು. ಒಂದು ಮರ ಕಡಿದರೆ ಅದರ ಬದಲಿಗೆ ಬೇರೆ ಸಸಿನೆಟ್ಟು ಹೂ ಗಿಡ ಮರಗಳನ್ನು ಬೆಳೆಸುತ್ತಾ ಪ್ರಕೃತಿ ಮಾತೆಯಲ್ಲಿ ಆನಂದವನ್ನು ಕಾಣುತ್ತಾರೆ.

**ಇಲ್ಲಿರುವಂತಹ ಕೆಲವು ಪ್ರೇಕ್ಷಣೀಯ ಸ್ಥಳಗಳು :**

ಪೋರ್ಟ್‌ಲೆಂಡ್‌ನಲ್ಲಿರುವ ವಾಟರ್ ಫ್ರಂಟ್ ಪಾರ್ಕ್. ಪಾರ್ಕಿನಲ್ಲಿರುವ ನದಿಗಳು ಸುತ್ತಮುತ್ತಲಿರುವ ಕಟ್ಟಡಗಳು ಬಹಳ ಸುಂದರವಾಗಿದೆ.

ವಾಶಿಂಗ್‌ಟನ್ ಪಾರ್ಕ್‌ನಲ್ಲಿರುವ ಜಪನೀಸ್ ಗಾರ್ಡನ್‌ನಲ್ಲಿ ಸುಂದರವಾದ ಬಗೆ ಬಗೆಯ ಹೂವಿನ ಗಿಡಗಳನ್ನು ಕಾಣಲು ಎರಡು ಕಣ್ಣು ಸಾಲದಂತಿದೆ. ಅದರ ಪಕ್ಕದಲ್ಲೆ ರೋಸ್ ಗಾರ್ಡನ್ ಇದೆ.

ವಾಶಿಂಗ್‌ಟನ್ ಮತ್ತು ಒರೆಗಾನ್ ರಾಜ್ಯಗಳನ್ನು ವಿಭಾಗಿಸುವ ಕೊಲಂಬಿಯಾ ನದಿಯ ಸುತ್ತಮುತ್ತಲಿರುವ ಜಲಪಾತಗಳ ರಮಣೀಯವಾದ ಪ್ರಕೃತಿ ಸೌಂದರ್ಯವನ್ನು ವರ್ಣಿಸಲು ಅಸಾಧ್ಯವಾಗಿದೆ.

ದಾಲಸ್ ಹ್ಯೂಸ್ಟನ್ ಸ್ಯಾನ್ ಅಂಟೋನಿಯೋ ಸಿಟಿ ಬಹಳ ಸುಂದರವಾದ ನಗರವಾಗಿದೆ.

ಹಿಮಾವೃತ ಮೌಂಟ್ ರೈನ್ಯರ್ ಮತ್ತು ಗಗನಚುಂಬಿ ಕಟ್ಟಡಗಳಿಂದ ತುಂಬಿದ ಸಿಯಾಟಲ್ ನಗರ ತುಂಬಾ ಸುಂದರವಾಗಿದೆ.

ಇಲ್ಲಿ ಇನ್ನೊಂದು ನೋಡಬೇಕಾದ ಸ್ಥಳ ಅಕ್ವೇರಿಯಮ್. ಇಲ್ಲಿ ಬಣ್ಣ ಬಣ್ಣದ ಮೀನುಗಳು, ಚಿತ್ರವಿಚಿತ್ರಾಕೃತಿಯ ನೋಡಿದವರು ಹೂವೆಂದು ಭಾವಿಸುವಂಥ ಮೀನುಗಳು, ನಕ್ಷತ್ರ ಮೀನು, ಸೀ-ಲಯನ್ ಮೀನು, ಜೆಲ್ಲಿ ಫಿಶ್, ಇತ್ಯಾದಿಗಳು ಇವೆ.

ಸ್ನೋಕೋಮಿ ಫಾಲ್ಸ್ ಕೂಡಾ ಕಣ್ಮನಸೆಳೆಯುವ ಸುಂದರ ತಾಣವಾಗಿದೆ.

ಕೇಲಿಫೋರ್ನಿಯಾ ರಾಜ್ಯದಲ್ಲಿ ಬಹಳ ಎತ್ತರವಾದ ಅಗಲಗಲವಾಗಿ ಬೆಳೆದಂತ ಮರಗಳನ್ನು ನೋಡಲು 2 ಕಣ್ಣು ಸಾಲದು. ಅಲ್ಲಿ ಇನ್ನೊಂದು ವಿಶೇಷತೆಯೆಂದರೆ ಬೃಹದಾಕಾರದ ಮರ ಸೀಳು ಬಿಟ್ಟಾಗ ಅ ಮರದ ಮಧ್ಯದಲ್ಲೆ ಕಾರುಗಳು ಓಡಾಡ್ತವೆ.

ಇಲ್ಲಿಯ ಜನರ ಜೀವನ ಕ್ರಮ ನಮ್ಮ ಭಾರತದ ಹಾಗೆ ಇಲ್ಲ, ನಮ್ಮಲ್ಲಿರುವ ಹಾಗೆ ಕೌಟುಂಬಿಕ ಪ್ರೀತಿ, ಗಂಡ-ಹೆಂಡತಿ, ತಂದೆ ಮಕ್ಕಳ ಮಧುರ ಸಂಬಂಧ ಅಲ್ಲಿಕಾಣ ಬರುವುದಿಲ್ಲ, ಅಲ್ಲಿ ಮಕ್ಕಳಿಗೆ 18 ವರ್ಷ ತುಂಬಿದ ಮೇಲೆ ಅವರವರ ದಾರಿ ಅವರವರೇ ನೋಡಿಕೊಳ್ಳಬೇಕು. ಹೀಗಿರುವಾಗ ತಾಯಿಯಿಂದ ಮಕ್ಕಳು ಬೇರೆ ಬೇರೆಯಾಗುತ್ತಾರೆ. ಇಲ್ಲಿ ವೃದ್ಧಾಪ್ಯದಲ್ಲಿ ಜನರು ಹೆಂಡತಿ ಮಕ್ಕಳನ್ನು ಅವಲಂಬಿಸದೆ ತಮ್ಮ ಸಂಪಾದನೆಯಲ್ಲಿ ಬದುಕುತ್ತ ಕೊನೆಗಾಲದಲ್ಲಿ ಅಸ್ವಸ್ಥವಾದಾಗ ತಮ್ಮದೆಲ್ಲವನ್ನು ಸರ್ಕಾರಕ್ಕೆ ಒಪ್ಪಿಸುತ್ತಾರೆ. ಆಗ ಸರ್ಕಾರವೇ ಅವರನ್ನು ನೋಡಿಕೊಳ್ಳುತ್ತದೆ.

ಕೆಲವು ವಿಷಯದಲ್ಲಿ ಅಮೇರಿಕ ತುಂಬಾ ಮುಂದುವರಿದ ದೇಶ. ಆದರೆ ನಮ್ಮ ಭಾರತದಲ್ಲಿರುವ ಕೌಟುಂಬಿಕ ಪ್ರೀತಿ, ಮಾನವ ಪ್ರೇಮ, ದಯೆ, ಪರೋಪಕಾರ ಸದ್ಗುಣಗಳು, ಒಳ್ಳೆಯ ಸಂಸ್ಕಾರ, ದೈವ ದೇವರಲ್ಲಿ, ಗುರುಹಿರಿಯರಲ್ಲಿ ಗೌರವ ಇತ್ಯಾದಿ ಇಲ್ಲಿ ಕಾಣಸಿಗಲಾರವು. □

# ಆಡಳಿತ ಮೊಕ್ತೇಸರರಾಗಿ ಕೆ. ಗೋಪಾಲರಾವ್ ಕಡಬ ಆಯ್ಕೆ

ಪುತ್ತೂರು ತಾಲೂಕಿನ ಕಡಬದಲ್ಲಿರುವ ಸುಮಾರು 1200 ವರ್ಷಗಳ ಹಿಂದಿನ, ಆದಿಜಗದ್ಗುರು ಶ್ರೀ ಶಂಕರಾಚಾರ್ಯರು ಸಂದರ್ಶಿಸಿದ್ದ ಶ್ರೀ ಶ್ರೀಕಂಠ ಸ್ವಾಮಿ, ಶ್ರೀ ಮಹಾಗಣಪತಿ ದೇವಸ್ಥಾನದ ಆಡಳಿತ ಮೊಕ್ತೇಸರರಾಗಿ ಕಡಬ ಕುಂಭಾಟ್ ಮನೆತನದ ಕೆ. ಗೋಪಾಲರಾವ್ ಪುನರಾಯ್ಕೆಗೊಂಡು ಅಧಿಕಾರ ಸ್ವೀಕರಿಸಿರುತ್ತಾರೆ.

ನಾದುರಸ್ತಿಯಲ್ಲಿದ್ದ ಈ ದೇವಾಲಯವನ್ನು 2001ರಲ್ಲಿ ಪ್ರಥಮ ಬಾರಿ ಅಧ್ಯಕ್ಷರಾಗಿ ದತ್ತಿ ಇಲಾಖೆಯಿಂದ ಆಯ್ಕೆಗೊಂಡಾಗ ಊರವರನ್ನು ಸಂಘಟಿಸಿ ಜೀರ್ಣೋದ್ಧಾರ ಮಾಡಿ, ಬ್ರಹ್ಮಕಲಶ ನೆರವೇರಿಸಿದ್ದರು. ಈ ದೇವಾಲಯವಲ್ಲದೆ ಶ್ರೀಯುತರು ಇತರ ಮೂರು ಪಾಳು ಬಿದ್ದ ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿ, ಬ್ರಹ್ಮಕಲಶ ನೆರವೇರಿಸುವಲ್ಲಿ ಪ್ರಧಾನ ಪಾತ್ರ ವಹಿಸಿದ್ದರು. ಇವರ ಧಾರ್ಮಿಕ ಸೇವೆಯನ್ನು ಕಂಡು ಶೃಂಗೇರಿಯ ಶ್ರೀ ಶ್ರೀ ಜಗದ್ಗುರುಗಳು, ಸುಬ್ರಹ್ಮಣ್ಯ ಮಠದ ಶ್ರೀ ಶ್ರೀ ಸ್ವಾಮೀಜಿಯವರು, ಎಡತೊರೆ ಮಠದ ಶ್ರೀ ಶ್ರೀ ಸ್ವಾಮೀಜಿ ಯವರು ಹಾಗೂ ರಾಮಚಂದ್ರಾಪುರ, ಎಡನೀರು ಮಠದ ಸ್ವಾಮೀಜಿಯವರುಗಳು ಸನ್ಮಾನಿಸಿರುತ್ತಾರೆ.

ಮಾತ್ರವಲ್ಲ 2007ರಲ್ಲಿ ಧಾರವಾಡದಲ್ಲಿ ಇವರು ಧಾರ್ಮಿಕ ಸೇವೆಗಾಗಿ ರಾಷ್ಟ್ರಪ್ರಶಸ್ತಿ ಕೂಡಾ ಪಡೆದಿರುತ್ತಾರೆ.

ಶಿಕ್ಷಕರಾಗಿ ದುಡಿಯುತ್ತಿದ್ದಾಗ ತಾಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪಡೆದಿರುತ್ತಾರೆ.

ಸಾಹಿತ್ಯ ಸೇವೆಗಾಗಿ ಎರಡು ಬಾರಿ ತಾಲೂಕುಮಟ್ಟದ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನಿತರಾಗಿದ್ದಾರೆ.

# ಸದನದಿಂದ ಮುರುಡೇಶ್ವರಕ್ಕೆ.... -ಅನಿಲ್‌ರಾವ್ ಬಿ.ಎಸ್.



ರೇಖಾಚಿತ್ರ : ರಘುವೀರ, ಪೆರ್ಡೂರು

ಪ್ರತಿ ವರ್ಷದಂತೆ ಈ ವರ್ಷ ಸುಬ್ರಹ್ಮಣ್ಯ ಸಭಾ ಕಿರುಪ್ರವಾಸವನ್ನು ಆಯೋಜಿಸಿತ್ತು. ಈ ಬಾರಿ ಮುರುಡೇಶ್ವರನ ಸನ್ನಿಧಿಗೆ ರೈಲಿನಲ್ಲಿ ಪ್ರಯಾಣಿಸುವ ವಿಶೇಷ ಯೋಜನೆ ಹಾಕಿಕೊಂಡಿದ್ದೆವು. ಮಂಗಳೂರಿನ ಬೆಳಿಗ್ಗೆ 6-30ಕ್ಕೆ ಹೊರಡುವ ಗೋವಾ ಪ್ಯಾಸೆಂಜರ್ ರೈಲಿನಲ್ಲಿ ಬೆಳಗ್ಗಿನ ಜಾವ ನಮಗೆಂದೇ ಒಂದು ಬೋಗಿ ಕಾಯ್ದಿರಿಸುವ ಕೆಲಸಕ್ಕಾಗಿ ನಮ್ಮ ಯುವಕರ ದಂಡು 5-30ಕ್ಕೆ ರೈಲ್ವೇ ನಿಲ್ದಾಣದಲ್ಲಿ ಬೀಡು ಬಿಟ್ಟಿತ್ತು. ಎಂದಿನಂತೆ ಆಹಾರ ಸಚಿವರಂತೆ ಶ್ರೀಯುತ ಕರುಣ್‌ರಾವ್ ಬೆಳ್ಳೆ ತಮ್ಮ ವಾಹನದಲ್ಲಿ ಉಪಹಾರಕ್ಕೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು ತಂದು ಯುವಕರ ಜೊತೆಗೂಡಿ ಬೋಗಿಯಲ್ಲಿ ತುಂಬಿಸಿಬಿಟ್ಟರು. ಸಮಯ ಹತ್ತಿರ ಬರುತ್ತಿದ್ದಂತೆ ನಮ್ಮ ಬೋಗಿ ಸೇರಿಕೊಂಡ ಸಮಾಜ ಬಾಂಧವರ ಸಂಖ್ಯೆ ಬರೋಬ್ಬರಿ 89. ಸಮಯಕ್ಕೆ ಸರಿಯಾಗಿ ರೈಲ್ವೇ ನಿಲ್ದಾಣ ಸೇರುವಲ್ಲಿ ಸಮಾಜ ಬಾಂಧವರು ಹಿಂದೆ ಬೀಳಲಿಲ್ಲ.

ನಂತರ ಅವರವರ ಆಸನವನ್ನು ಆಯ್ದುಕೊಂಡು ಅನಿಲ್‌ರಾಯರ ನಿರ್ದೇಶನದಂತೆ ಕಾಫಿ ತಿಂಡಿಯ ಸಮಯವನ್ನು ನಿಗದಿಪಡಿಸಲಾಯಿತು. ರೈಲು ಯಾನ ಪ್ರಾರಂಭವಾಗುತ್ತಿದ್ದಂತೆ ಶ್ರೀಕಾಂತ್ ರಾವ್ ಬಳಗ ಭಜನೆಯಲ್ಲಿ ತೊಡಗಿದರೆ ಸುಜಾತಾ ಬೆಳ್ಳೆ ಬಳಗ ದೇವರ ನಾಮ, ಪ್ರದೀಪ್ ರಾವ್ ಮತ್ತು ಮಕ್ಕಳ ಬಳಗ ಆಟದಲ್ಲಿ ತೊಡಗಿತು. ಹೊತ್ತೇರುತ್ತಿದ್ದಂತೆ ಮೋಜಿನ ಕಳೆ ಏರುತ್ತಿದ್ದರೆ ಇನ್ನೊಂದೆಡೆ ಇಡ್ಲಿ-ಸಾಂಬಾರ್‌ಗಾಗಿ ಹೊಟ್ಟೆ ಬಡಿದುಕೊಳ್ಳುತ್ತಿತ್ತು. ಹಾಗೂ ಉಪಾಹಾರದ ವಿತರಣೆ ಆಯಿತು. 10-30ರ ಹೊತ್ತಿಗೆ ಮುರುಡೇಶ್ವರ ತಲುಪಿ ಅಲ್ಲಿಂದ ಟೆಂಪೋ ಮೂಲಕ ದೇವಳಕ್ಕೆ ಬಂದೆವು. ಮಧ್ಯಾಹ್ನದ ವರೆಗೂ ದೇವರ ದರ್ಶನ, ಪೂಜೆಯಲ್ಲಿ ಸಮಾಜಬಾಂಧವರು ನಿರತರಾದರು. ಕ್ಷೇತ್ರದಲ್ಲಿ ಪ್ರಸಾದ ಭೋಜನ ಸ್ವೀಕರಿಸಿ, ಮಧ್ಯಾಹ್ನದ ನಂತರದ ಕಾರ್ಯಕ್ರಮದ ಉಸ್ತುವಾರಿ, ಮನೋರಂಜನಾ ಆಟಗಳನ್ನು ಅರುಣಾ ಸೋಮಶೇಖರ್ ದಂಪತಿಗಳು, ಶೈಲಜಾ ಶ್ರೀಕಾಂತ್‌ದಂಪತಿಗಳು, ಅನುರಾಧಾ ಟೀಚರ್, ವಿನೋದ್‌ರಾವ್ ನಡೆಸಿಕೊಟ್ಟರು. ಅಧಿಕ ಸಂಖ್ಯೆಯಲ್ಲಿ ಹಿರಿಯರು, ಕಿರಿಯರು ವಿವಿಧ ಆಟಗಳಲ್ಲಿ ಪಾಲ್ಗೊಂಡರು.

ಸಂಜೆ ಬೀಚ್‌ನಲ್ಲಿ ಸುತ್ತಾಡಿ, ರೋಮಾಂಚಕ ಬೈಕ್ ರೈಡಿಂಗ್, ಈಜುವುದು ಇತ್ಯಾದಿ ಆಟಗಳಲ್ಲಿ ಪಾಲ್ಗೊಂಡು ಮತ್ತೆ ರೈಲ್ವೇ ನಿಲ್ದಾಣಕ್ಕೆ ಬಂದೆವು. ನಿಗದಿತ ಸಮಯಕ್ಕಿಂತ ರೈಲು ಅರ್ಧ ಗಂಟೆ ವಿಳಂಬವಾದರೂ ಮಂಗಳೂರಿಗೆ ನಿಗದಿತ ಸಮಯಕ್ಕೆ ತಲುಪಿದ್ದೆವು. ಬರುವಾಗ ರೈಲಿನಲ್ಲಿ ಕೆಲವರು ಸುಸ್ತಾದಂತೆ ಕಂಡರೂ ಆಟ-ಕೂಟಗಳು ರಂಜನೆ ನೀಡಿದವು. ಮಂಗಳೂರಿನ ರೈಲ್ವೇ ನಿಲ್ದಾಣದಲ್ಲಿ ಇಳಿದ ಸಮಾಜ ಬಾಂಧವರು ತಮ್ಮ ತಮ್ಮ ಮನೆಗೆ ತೆರಳುವಾಗ ಒಂದು ಸಂತೃಪ್ತ ನಗು ಅವರ ಮುಖದಲ್ಲಿತ್ತು.

# ಜೀರ್ಣೋದ್ಧಾರ -ನೆಲೆ, ಹಿನ್ನೆಲೆ

(ಹಿಂದಿನ ಸಂಚಿಕೆಯಿಂದ...)

ಬ. ಎ. ಶರ್ಮ, ರಜತಪೀಠಪುರಮ್

ಸಾಮಾನ್ಯತಃ ಇನ್ನು ಮುಂದೆ ವಿವರಿಸುವ ಕೆಲವೊಂದು ಪ್ರಸಂಗಗಳಲ್ಲಿ ಪರಿಹಾರವನ್ನು ಮಾಡಬೇಕು. ಕ್ಷೇತ್ರೇಮೃತಿರ್ಜನನಮಂಕಣ ಮಂಟಪಾದ್... ಕ್ಷೇತ್ರ, ಪರಿಸರ, ಅಂಕಣ, ಮಂಟಪಾದಿಗಳಲ್ಲಿ ಜನನ-ಮರಣಗಳು; ಮೂತ್ರ, ರಕ್ತಾದಿ ಪಾತಗಳು, ಪತಿತಾದಿಪ್ರವೇಶ, ಗರ್ಭಗುಡಿಯಲ್ಲಿ ಗೂಬೆ- ಗಿಡುಗ- ಕಾಗೆ-ನಾಯಿ-ಕತ್ತೆ-ಒಂಟೆ-ಹಂದಿ-ನರಿ-ಕರಡಿ-ಕೇರೆಹಾವು ಇತ್ಯಾದಿ ಪ್ರವೇಶ.

ಛತ್ರಾಕನಾಕು ಮಧುಕಾದಿ....ಅಣಬೆ, ಹುತ್ತ ಜೇನುಗೂಡು ಇತ್ಯಾದಿಗಳ ಉಂಟಾಗುವಿಕೆ, ಬಿಂಬ ಅಳುವಂತೆ ತೋರುವುದು, ಬೆವರುವುದು, ಬಿಂಬಕ್ಕೆ ಉರಿ, ಬಿಂಬದ ಪತನ-ಚಲನಾದಿಗಳು, ಅಂಗಭಂಗ, ನಿರ್ದಿಷ್ಟ ಕಾರಣವಿಲ್ಲದೇ ಪೂಜಾಲೋಪ ವಾಗುವಂತಹ ಸಂದರ್ಭಗಳು. ಕ್ಷುದ್ರಾನ್ಯ ಮಂತ್ರಯಜನಂ.....ಕ್ಷುದ್ರ ಮಂತ್ರಗಳಿಂದ ಪೂಜೆ, ಅನ್ಯಮಂತ್ರಗಳಿಂದ ಪೂಜೆ, ಅನ್ಯ ದೇವತಾ ಮಂತ್ರಗಳಿಂದ ಪೂಜೆ, ಅನ್ಯ ಕುಟುಂಬದವರಿಂದ, ನಿಷಿದ್ಧದುಷ್ಟ ಪುಷ್ಪ ಗಳಿಂದ ಪೂಜೆ, ಕಾಳುಮೆಣಸು ಇತ್ಯಾದಿಗಳ ಲೇಪ - ಇವೆಲ್ಲಾ ತಂತ್ರಶಾಸ್ತ್ರದಲ್ಲಿ ಹೇಳಿದ ದುರ್ನಿಮಿತ್ತಗಳು. ಅಂಕಣ, ತಟಾರಾದಿಗಳಲ್ಲಿ ಗವಾದಿಗಳ ಮೃತಿಗೂ ಪ್ರಾಯಶ್ಚಿತ್ತ ಮಾಡಬೇಕು. ಕ್ಷೇತ್ರೇದೀರಿತ, ಪಂಚಾತಾದಿಕಮವಿಜ್ಞಾತಂ...... 'ಕ್ಷೇತ್ರೇಮೃತಿ' ಮೊದಲುಗೊಂಡು ಹೇಳಲಾದ ಮೃಯ ಆದಿ ಅವಿಜ್ಞಾತವಾದದ್ದು ಜನಾದರೂ ಇದ್ದರೆ, ಪೂಜೆ-ಉತ್ಸವಾದಿಗಳಲ್ಲಿ ವೈಕಲ್ಯ, ನೀರಿನಲ್ಲಿ ಹಾಕಲ್ಪಟ್ಟ ಶತ್ರುಕೃತ ಚೂರ್ಣಾದಿ ಪ್ರಯೋಗ, ಸಾನ್ನಿಧ್ಯಕ್ಕೆ ಹಾನಿ, ಧನ-ಲಾಭ-ನಷ್ಟ, ಇತ್ಯಾದಿ ವಿಷಯಗಳನ್ನು ಪ್ರಶ್ನ ಚಿಂತನೆಯ ಮೂಲಕ ತಿಳಿದು ಸೂಕ್ತ ರೀತಿಯ ಪರಿಹಾರಗಳನ್ನು ಮಾಡಬೇಕು. ಹೀಗೆ ಹಿಂದೆ ತಿಳಿಸಿದಂತಹ ದುರ್ನಿಮಿತ್ತಗಳಿಗೆ ಕಾರಣವನ್ನು ತಿಳಿಯಲು, ಕ್ಷೇತ್ರದಲ್ಲಿ ಸಂಭವಿಸುವಂತಹ ಜ್ಞಾತಾಜ್ಞಾತ ದೋಷಗಳನ್ನು ತಿಳಿದು ಪರಿಹಾರವನ್ನು ಕಾಣಲು ದೇವ ಪ್ರಶ್ನೆ ಅತೀ ಅಗತ್ಯವಾಗಿದೆ. ಸರ್ವಶಕ್ತನೂ, ಪರಮ ದಯಾಳುವೂ ಆದಂತಹ ಭಗವಂತನನ್ನು ಶರಣು ಹೊಂದಿದರೆ ಸಾಕು. ಯಾವುದೇ ತರಹದ ದೋಷಗಳಿದ್ದರೂ ಅದು ಪರಿಹಾರವಾಗುತ್ತದೆ ಎಂದು ಕೆಲವರು ಹೇಳುತ್ತಾರೆ. ಆದರೆ ಅದು ಯುಕ್ತವಲ್ಲ, ಯಾಕೆಂದರೆ, ಅದು ಶರಣಾಗತಿಯ 'ಆಭಾಸ' ಮಾತ್ರ. ಶರಣು ಹೋಗುವ ನಮ್ಮ ಮನಸ್ಸು ಉಚ್ಚ ಮಟ್ಟದಲ್ಲಿ ಪರಿಪಕ್ವತೆಯನ್ನು ಹೊಂದಿರಬೇಕು. ವಿಶ್ವವ್ಯಾಪಿಯಾದ ಭಗವಂತನನ್ನು ಒಂದು ನಿರ್ದಿಷ್ಟ ಸ್ಥಾನದಲ್ಲಿ, ನಿರ್ದಿಷ್ಟ ರೂಪದಲ್ಲಿ ಆವಾಹಿಸಿ, ಆರಾಧಿಸಿಕೊಂಡು ಬಂದ ಮೇಲೆ ಅಲ್ಲಿ ಮಾಡುವ ಪ್ರತಿಕರ್ಮಗಳಿಗೂ ಧನಾತ್ಮಕವಾಲೀ, ಋಣಾತ್ಮಕವಾಗಲೀ ಫಲವಂತು ಇದ್ದೇ ಇರುತ್ತದೆ. ದೋಷಗಳಿಗೆ ಪರಿಹಾರವಿಲ್ಲ ಎನ್ನುವ ಅಭಿಪ್ರಾಯ ಕೆಲವರಿಗೆ ಇದೆ. ಇದೂ ಆಯುಕ್ತ, ಅದು ದೋಷ ಹೌದೋ ಹಾಗಾದರೆ ಅದಕ್ಕೆ ಪರಿಹಾರವಿದೆ. ನಮಗೆ ಪರಿಹರಿಸಿಕೊಳ್ಳುವ ಮನಸ್ಸು ಬೇಕು ಅಷ್ಟೇ. ಪ್ರಶ್ನಮಾರ್ಗದಲ್ಲಿ ಹೀಗೆ ಹೇಳಲಾಗಿದೆ. ದೇವೀನಿಷೇವಾಗಣನಾಥ ಹೋಮ ಭಾಗ್ಯೈಕಮತ್ಯ ಪ್ರದಸೂಕ್ತ ಜಾಪಾಃ । ಆಪನ್ನಿವೃತ್ತ್ಯೈ ಧನಧಾನ್ಯವೃದ್ಧ್ಯೈ ಗವ್ಯಾಭಿಷೇಕಾದಿಕದಿಕ ಮತ್ರ ಶುದ್ಧ್ಯೈ ॥ - ದೇವಾಲಯದಲ್ಲಿ ಸರ್ವಾಪನ್ನಿವೃತ್ತಿಗಾಗಿ ಗಣಹೋಮ, ಭಗವತೀ ಸೇವೆ (ಶಕ್ತ್ಯಾನುಸಾರ ದುರ್ಗಾಪೂಜೆ) ಭಾಗ್ಯಸೂಕ್ತ, ಸಂವಾದ ಸೂತ್ರಗಳ ಜಪಮಾಡಿಸಿ 'ಮೂಲದೇವತಾ ತೃಪ್ತಿಯ ಕರ್ಮ' ನಡೆಸಿದರೆ, ಶುದ್ಧಿಗಾದರೆ ಗವ್ಯಾಭಿಷೇಕ (ಪಂಚಗವ್ಯ ಪ್ರೋಕ್ಷಣೆ, ಪಂಚಾಮೃತಾಭಿಷೇಕ, ಸಂಪ್ರೋಕ್ಷಣೆ, ನವಕಲಶ, ಪ್ರಧಾನ ಹೋಮ ಸ್ನಪನ ಕಲಶಾದಿಗಳನ್ನು) ಇತ್ಯಾದಿಗಳನ್ನು ನಡೆಸಿದರೆ ಧನ-ಧಾನ್ಯ ಸಮೃದ್ಧಿಯಾಗುವುದು. 'ಪ್ರತಿಮಾ ಅಲ್ಪ ಬುದ್ಧೀನಾಮ್' ಎಂಬ ಮಾತೇ ಇದೆ. ವಿಶ್ವವ್ಯಾಪಿಯಾದ ಭಗವಂತನನ್ನು ಪ್ರತಿಮೆಯಲ್ಲಿ ಕಂಡು, ಆತನ ಆರಾಧನೆಯನ್ನು ಮಾಡುತ್ತಾ ಆಧ್ಯಾತ್ಮಿಕ ಸುಖವನ್ನು ಹೊಂದಬೇಕು. ಅದು ಬಿಟ್ಟು ರಾಜಕೀಯ ಇತ್ಯಾದಿ ಕಾರ್ಯಗಳಲ್ಲಿ ತೊಡಗುವುದು ಸಲ್ಲದು. ಅನ್ಯಕ್ಷೇತ್ರೇ ಕೃತಂ ಪಾಪಂ ಪುಣ್ಯ ಕ್ಷೇತ್ರೇ ವಿನಶ್ಯತಿ । ಪುಣ್ಯಕ್ಷೇತ್ರೇ ಕೃತಂ ಪಾಪಂ ವಜ್ರಲೇಪೋಭವಿಷ್ಯತಿ ॥ ಬೇರೆ ಕಡೆ ಮಾಡಿದಂತಹ ಪಾಪಕರ್ಮವು ಪುಣ್ಯ ಕ್ಷೇತ್ರಗಳಲ್ಲಿ ದೇವರ ಆರಾಧನೆಯನ್ನು ಮಾಡುವ ಮೂಲಕ ನಾಶವಾಗುತ್ತೆ. ಆದರೆ ಪುಣ್ಯ ಕ್ಷೇತ್ರದಲ್ಲಿ ಮಾಡಿದ ಪಾಪವು ವಜ್ರಲೇಪದಂತೆ ಎಷ್ಟು ತೊಳೆದರೂ ಹೋಗದು. ಆದ್ದರಿಂದ ಪ್ರತಿಯೊಬ್ಬರೂ ಪುಣ್ಯಕ್ಷೇತ್ರದಂತಹ ದೇವಾಲಯಗಳಲ್ಲಿ ತಮ್ಮ ಪಾಪಗಳನ್ನು ಕಳೆಯುತ್ತಾ, ದೇವರ ಆರಾಧನೆಯಿಂದ ಪುಣ್ಯವನ್ನು ಸಂಪಾದಿಸುತ್ತಾ ಸಕಲ ಸನ್ಮಂಗಳವನ್ನು ಹೊಂದುವಂತಾಗಲಿ, ಆ ಮೂಲಕ 'ಧರ್ಮವೆಂಬ ಚಂದ್ರಬಿಂಬ'ವು ಇನ್ನೂ ಚೆನ್ನಾಗಿ ಪ್ರಕಾಶಿಸುವಂತಾಗಲಿ.

(ಮುಗಿಯಿತು)

# ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಭಾ ವಾರ್ಷಿಕ ಸಭೆ


ಬೈಂದೂರು ಶೇಷಪ್ಪನವರ ಮನೆಯಲ್ಲಿ ಲಿಂಗಪ್ಪಯ್ಯ ವೇದಿಕೆಯಲ್ಲಿ ಜರಗಿದ ವಾರ್ಷಿಕ ಅಧಿವೇಶನದಲ್ಲಿ ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಭಾದ ಪದಾಧಿಕಾರಿಗಳ ಆಯ್ಕೆ ನಡೆಯಿತು.


ನೂತನ ಅಧ್ಯಕ್ಷರಾಗಿ ಶಂಕರನಾರಾಯಣ ಹಾಲು ಉತ್ಪಾದಕರ ಸಂಘದ ಕಾರ್ಯದರ್ಶಿ ಸಾಗೂ ರೋಟರಿ ಮಾಜಿ ಅಧ್ಯಕ್ಷ ಎಸ್. ದಯಾನಂದ ರಾವ್ ಮತ್ತು ಕಾರ್ಯದರ್ಶಿಯಾಗಿ ಮಂಜುನಾಥ ಹೆಬ್ಬಾರ್ ಆಯ್ಕೆಯಾಗಿದ್ದಾರೆ.

ಪದಾಧಿಕಾರಿಗಳಾಗಿ ಉಮೇಶ ಶ್ಯಾನುಭಾಗ್ ಕಿರಿಮಂಜೇಶ್ವರ (ಗೌರವಾಧ್ಯಕ್ಷ), ಹೆರಿಯಣ್ಣ ರಾವ್ ಹೊಸ್ಕೋಟೆ (ಸ್ಥಾಪಕಾಧ್ಯಕ್ಷ), ವಿಶ್ವನಾಥ ಹೆಬ್ಬಾರ್ ರಟ್ಟಾಡಿ, ಗೋಪಾಲಕೃಷ್ಣ ಹೆಬ್ಬಾರ್, ಬಾಲಕೃಷ್ಣ ಶ್ಯಾನುಭಾಗ್, ಗಣೇಶ್ ರಾವ್ (ಉಪಾಧ್ಯಕ್ಷರು), ಪ್ರೊ। ಶಂಕರ ರಾವ್ ಕಾಳಾವರ (ಕೋಶಾಧಿಕಾರಿ), ಕೆ.ಜಿ. ವಿಷ್ಣುಮೂರ್ತಿ (ಲೆಕ್ಕಪರಿಶೋಧಕ), ಕಾರ್ಯಕಾರಿ ಸಮಿತಿ ಸದಸ್ಯರಾಗಿ ಶೇಷಪ್ಪಯ್ಯ ಬೈಂದೂರು, ಸುಬ್ರಹ್ಮಣ್ಯ ಜೋಷಿ ಐರ್‌ಬೈಲು, ಪ್ರಕಾಶ್ ರಾವ್ ಪಡುವರಿ, ವೆಂಕಟೇಶ ರಾವ್ ಹೊಸ್ಕೋಟೆ, ಆನಂದ ರಾವ್ ಹೊಸ್ಕೋಟೆ, ಸತೀಶ ಮೇರ್ಟ ಹೆರಂಜಾಲು, ನಾಗೇಶ ಹೆಬ್ಬಾರ್ ಹೆಮ್ಮಾಡಿ, ರವೀಂದ್ರ ದೊಡ್ಮನೆ ಬೀಜಾಡಿ, ಜಯಪ್ರಕಾಶ ಉಳ್ತೂರು, ರಾಜಶೇಖರ ಹೆಬ್ಬಾರ್ ತಾರೆಕಟ್ಟೆ, ಕೃಷ್ಣಮೂರ್ತಿ ಹೆಬ್ಬಾರ್ ಕುಂಭಾಶಿ, ಶಾಂತಾ ಗಣೇಶ ರಾವ್ ಕುಂಭಾಶಿ, ರಾಜಾರಾಮ್ ಕುಂದಾಪುರ ಆಯ್ಕೆಯಾದರು.

ಈ ಸಂದರ್ಭದಲ್ಲಿ ಯುವ ವೇದಿಕೆ ಅಧ್ಯಕ್ಷರಾಗಿ ಹೊಸ್ಕೋಟೆ, ಕಾರ್ಯದರ್ಶಿಯಾಗಿ ಅನೀಶ್ ಶ್ಯಾನುಭಾಗ್ ಮತ್ತು ಮಹಿಳಾ ವೇದಿಕೆ ಅಧ್ಯಕ್ಷೆಯಾಗಿ ಸುಮಾ ಅರುಣ ಶ್ಯಾನುಭಾಗ್, ಕಾರ್ಯದರ್ಶಿಯಾಗಿ ಸುಮತಿ ಮೇರ್ಟ ಇವರನ್ನು ಆಯ್ಕೆ ಮಾಡಲಾಯಿತು.


ರಾಮಾ ಅಟೋಮೊಬೈಲ್ಸ್
ಮಾರುತಿ ವಾಹನ ತಜ್ಞರು
ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.
ಫೋನ್ : 2454355, ಮೊಬೈಲ್ : 94485 45702
ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ




PRAMOD
AUTOMOBILES
Ph : 2491723 (O)
2493633 (H.O.)
2212723 (R)
KARANGALPADY, MANGALORE - 575 003.
: Wholesale & Retail Dealers in :
2 & 3 WHEELERS SPARES & ACCESSORIES
Prop. : Ln. K. HARSHA KUMAR



ಉಡುಪಿ ವಿಶಿಷ್ಟ ರುಚಿಯುಳ್ಳ
Rao's 'ಮಾತೃಛಾಯಾ'ರವರ
ಸಾರಿನ ಹಾಗೂ ಸಾಂಬಾರ್ ಮಸಾಲೆ, ಅಪ್ಪೆಮಿಡಿ ಹಾಗೂ ಮಿಡಿ ಉಪ್ಪಿನಕಾಯಿ
ಹಪ್ಪಳ ಹಾಗೂ ಸೆಂಡಿಗೆಗಳು, ಶುದ್ಧ ದನದ ತುಪ್ಪ ಹಾಗೂ ಜೇನು ತುಪ್ಪ
-: ಮೊದಲಾದ ನಿತ್ಯೋಪಯೋಗಿ ವಸ್ತುಗಳಿಗೆ ಸಂದರ್ಶಿಸಿರಿ :-
ಭಾರತ್ ಸ್ಟೋರ್ಸ್
ರಥಬೀದಿ, ಉಡುಪಿ - 576 101. ಫೋನ್ : 2522444

## ಮಾಂಗಲ್ಯಂ ತಂತುನಾನೇನ ....

ಎಲ್ಲೂರು ಶ್ರೀಮತಿ ಸರೋಜಿನಿ ಮತ್ತು ಶ್ರೀ ವೈ.ಶಾಂತಿನಾಥರಾವ್‌ರವರ ಪುತ್ರ **ದಿನೇಶ್** ಹಾಗೂ ಕೊಲ್ಹಾಪುರ ಶ್ರೀಮತಿ ಸುವರ್ಣ ಮತ್ತು ದಿ| ಶ್ರೀ ರವೀಂದ್ರ ದತ್ತಾತ್ರೇಯ ರಾಜಾಜ್ಞಾ ರವರ ಪುತ್ರಿ **ಸಂಪದಾ** ಇವರ ವಿವಾಹವು ತಾ.22-2-2009ರಂದು ಉಡುಪಿ ಶ್ರೀ ಲಕ್ಷ್ಮೀ ಸಭಾಭವನದಲ್ಲಿ ನೆರವೇರಿತು.

ಬಂಗಾಡಿ ಶ್ರೀ ಬಿ. ಕೆ. ಶ್ರೀಕಾಂತರಾಯರ ಪುತ್ರ **ವಿನಯ್‌ನಿರಂಜನ್** ಹಾಗೂ ಕೆಳಗಿನ ಕ್ಯಾದಿಗೆ ದಿ| ಸುಬ್ಬರಾಯರ ಪುತ್ರಿ **ಪ್ರಣೀತಾ** ಇವರ ವಿವಾಹವು ತಾ.27-2-2009ರಂದು ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ಕಲ್ಯಾಣಮಂಟಪದಲ್ಲಿ ಜರಗಿತು.

ಶ್ರೀಮತಿ ಮತ್ತು ಶ್ರೀ ಕೆ. ಶ್ರೀನಿವಾಸ ರಾವ್ ಇವರ ಪುತ್ರ **ರವಿರಾಜ** ಹಾಗೂ ಶ್ರೀಮತಿ ಮತ್ತು ಶ್ರೀ ಎಮ್. ಮೋಹನ್‌ರಾವ್ ಇವರ ಪುತ್ರಿ **ಕವಿತಾ** ಇವರ ವಿವಾಹವು ತಾ.19-2-2009ರಂದು ಉಡುಪಿ ಕುಕ್ಕಿಕಟ್ಟೆಯ ಅನುಗ್ರಹ ಸಭಾಭವನದಲ್ಲಿ ನೆರವೇರಿತು.

ಮಡಗಾಂವ್-ಗೋವಾದಲ್ಲಿರುವ ಮಾಂಟ್ರಾಡಿ ಶ್ರೀಕಾಂತ್‌ರಾವ್ ಮತ್ತು ಶ್ರೀಮತಿ ಗೀತಾ ರಾವ್‌ರವರ ಪುತ್ರಿ **ಡಾ| ಪ್ರಿಯಾ** ಹಾಗೂ ವಾಸ್ಕೋ ಗೋವಾದಲ್ಲಿರುವ ಶ್ರೀ ಯೋಗಿಂದರ್ ಸಿಂಗ್ ಮತ್ತು ಶ್ರೀಮತಿ ಎಸ್. ಕೌರ್‌ರವರ ಪುತ್ರ **ಡಾ| ಮಂಜೀತ್** ಇವರ ವಿವಾಹವು ತಾ.13-2-2009ರಂದು ಮಡಗಾಂವ್‌ನಲ್ಲಿರುವ ಶ್ರೀ ರಾಘವೇಂದ್ರ ಸಭಾಗೃಹದಲ್ಲಿ ನೆರವೇರಿತು.

ಶ್ರೀ ಎಚ್.ಎಸ್.ರಮಾನಾಥರಾಯರ ಪುತ್ರ **ಸುನೀಲ್‌ಕುಮಾರ್** ಹಾಗೂ ಇಲಂತೋಡಿ ಎ. ಸಿ. ಸದಾನಂದ ರಾಯರ ಪುತ್ರಿ **ಸ್ಮಿತಾ** ಇವರ ವಿವಾಹವು ತಾ.5-3-2009ರಂದು ಪುತ್ತೂರು ಶ್ರೀ ಮಹಾಲಿಂಗೇಶ್ವರ ಸಭಾಭವನದಲ್ಲಿ ಜರಗಿತು.

ಶ್ರೀಮತಿ ಶಾರದಾ ಮತ್ತು ಸಕ್ಕಟ್ಟು ಶ್ರೀ ರಾಮಕೃಷ್ಣಯ್ಯನವರ ಪುತ್ರ **ಶ್ರೀಕುಮಾರ** ಹಾಗೂ ಕೆ. ಎಸ್. ಉಷಾರಾಜಾರಾಮರ ಪುತ್ರಿ **ರಮಾ** ಇವರ ವಿವಾಹವು ತಾ.5-3-2009ರಂದು ನಂದಳಿಕೆ ಶ್ರೀ ಮಹಾಲಿಂಗೇಶ್ವರ ಸ್ವಾಮೀ ಸನ್ನಿಧಿಯಲ್ಲಿ ನೆರವೇರಿತು.

ನೀಲಾವರ ಶ್ರೀಮತಿ ಪದ್ಮಲತಾ ಮತ್ತು ಶ್ರೀ ರಘುರಾಮರಾವ್ ಇವರ ಪುತ್ರ **ರಾಜಾರಾಮ** ಹಾಗೂ ಹೆರ್ಗ ಶ್ರೀಮತಿ ಮತ್ತು ಶ್ರೀ ನಿರಂಜನ ರಾಯರ ಪುತ್ರಿ **ನೀನಾ** ಇವರ ವಿವಾಹವು ತಾ.1-3-2009ರಂದು ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಮಂಟಪದಲ್ಲಿ ಜರಗಿತು.

## ಮೀನ ಮಾಸದ ವಿಶೇಷ ದಿನಗಳು

| | |
|---|---|
| 14-03-2009 | **ಮೀನ ಸಂಕ್ರಮಣ** |
| | **ಸಂಕಷ್ಟಹರ ಚತುರ್ಥೀ** |
| | ಚಂದ್ರೋದಯ ರಾತ್ರಿ, ಗಂ.9.37ಕ್ಕೆ |
| 17-03-2009 | **ಉತ್ತರಾಭಾದ್ರ ನಕ್ಷತ್ರಾರಂಭ** |
| 22-03-2009 | **ಸರ್ವೈಕಾದಶೀ** |
| 24-03-2009 | **ಪ್ರದೋಷಃ** |
| 26-03-2009 | **ಅಮಾವಾಸ್ಯಾ** |
| 27-03-2009 | **ಚಾಂದ್ರ ಯುಗಾದಿ** |
| 31-03-2009 | **ರೇವತೀನಕ್ಷತ್ರಾರಂಭ** |
| 05-04-2009 | **ಸರ್ವೈಕಾದಶೀ** |
| 07-04-2009 | **ಪ್ರದೋಷಃ** |
| 09-04-2009 | **ಪೂರ್ಣಿಮಾ** |
| 13-04-2009 | **ಮೇಷ ಸಂಕ್ರಮಣ** |
| | **ಸಂಕಷ್ಟಹರ ಚತುರ್ಥೀ** |
| | ಚಂದ್ರೋದಯ ರಾತ್ರಿ, ಗಂ.10.05ಕ್ಕೆ |

**ಅಭಿನಂದನೆ**

## ಕುಮಾರಿ ಪ್ರಗತಿ ಭಂಡಿ



**ವಿಶೇಷ ಸಾಧನೆ**

ಮಣಿಪಾಲ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ವಿಜ್ಞಾನ ದಿನದ ಅಂಗವಾಗಿ ಮಣಿಪಾಲದಲ್ಲಿ ಉಡುಪಿ ಹಾಗೂ ಮಂಗಳೂರು ಜಿಲ್ಲಾ ಮಟ್ಟದ ಸ್ಪರ್ಧೆಗಳು ನೆರವೇರಲ್ಪಟ್ಟು ಜೂನಿಯರ್ ಸಯನ್ಸ್ ಸೆಮಿನಾರ್ ''ಇಕೋ ಫ್ರೆಂಡ್‌ಲೀ ಎನ್‌ವಿರಾನ್‌ಮೆಂಟ್ (Eco Friendly Environment)ನಲ್ಲಿ ಪ್ರಥಮ ಹಾಗೂ 2008ರಲ್ಲಿ ಕೂಡ ಸಯನ್ಸ್ ಸೆಮಿನಾರ್ ''ಗ್ಲೋಬಲ್ ವಾರ್ಮಿಂಗ್ (Global Warming)ನಲ್ಲಿ ಕು| ಪ್ರಗತಿ ಭಂಡಿ ಪ್ರಥಮ ಬಹುಮಾನ ಗಳಿಸಿರುತ್ತಾಳೆ.

ಜಿಲ್ಲಾ ಮಟ್ಟದ ವಿಜ್ಞಾನ ಸಮಾವೇಶದಲ್ಲಿ ಜೂನಿಯರ್ ವಿಭಾಗದಲ್ಲಿ ಪ್ರಥಮ ಸ್ಥಾನ ಗಳಿಸಿದ್ದು ಶಿವಮೊಗ್ಗದಲ್ಲಿ ನಡೆದ ರಾಜ್ಯಮಟ್ಟದ ಮಕ್ಕಳ ವಿಜ್ಞಾನ ಸಮಾವೇಶದಲ್ಲಿ "Captain" ಆಗಿ ಈಕೆ ಪ್ರತಿನಿಧಿಸಿರುತ್ತಾಳೆ. ಈಕೆ ಪ್ರಸ್ತುತ ಮಣಿಪಾಲ ಎಂ.ಜೆ.ಸಿ. ಕಾಲೇಜಿನ 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಳೆ.

ಪೆರ್ಡೂರು ರವೀಂದ್ರ ಭಂಡಿ, ಪ್ರಬಂಧಕರು, ಸಿಂಡಿಕೇಟ್ ಬ್ಯಾಂಕ್, ಬ್ರಹ್ಮಗಿರಿ ಶಾಖೆ, ಉಡುಪಿ ಹಾಗೂ ಶ್ರೀಮತಿ ವಾಣಿ ಭಂಡಿ ದಂಪತಿಗಳ ಸುಪುತ್ರಿಯಾಗಿರುವ ಈಕೆಗೆ ಶ್ರೀಶಾರದಾ ಅಭಿನಂದನೆಗಳು.

## ಗೃಹಪ್ರವೇಶ

ಶ್ರೀಮತಿ ಮತ್ತು ಶ್ರೀ ಎಸ್. ಭವಾನಿ ಶಂಕರರಾವ್, ಮಲ್ಲಮಾರು ಮತ್ತು ಮಕ್ಕಳು ನೂತನವಾಗಿ ನಿರ್ಮಿಸಿದ ದೇವಿಕೃಪಾದ ಗೃಹಪ್ರವೇಶವು ತಾ.28-2-2009ರಂದು ಮಲ್ಲಮಾರಿನಲ್ಲಿ ನೆರವೇರಿತು.

ಮಂಗಳೂರು ಶ್ರೀಮತಿ ಲತಾ ಮತ್ತು ಶ್ರೀ ವಿ. ರಾಘವೇಂದ್ರ ರಾವ್ ಇವರು ನೂತನವಾಗಿ ನಿರ್ಮಿಸಿದ 'ಏರ್ಮಾಳ್ ಹೌಸ್'ನ ಗೃಹಪ್ರವೇಶವು ತಾ.4-3-2009ರಂದು ನೆರವೇರಿತು.

ಶ್ರೀ ಬಿ. ಹಿರಿಯಣ್ಣ ಹೆಬ್ಬಾರ್ ಇವರ ಪುತ್ರ **ಶಶಾಂಕ್** ಮತ್ತು ಶ್ರೀ ಕೊಲ್ಪೆ ವಿಠಲ ರಾವ್ ಇವರ ಪುತ್ರಿ **ಸುಷ್ಮಾ** ಇವರ ವಿವಾಹವು ತಾ.11-3-2009 ರಂದು ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಮಂಟಪದಲ್ಲಿ ಜರಗಿತು.

ಶ್ರೀಮತಿ ಪರಿಮಳಾ ಮತ್ತು ಕೆ. ಎಚ್. ಅಚ್ಚುತ ರಾಯರ ಪುತ್ರ **ರಾಘವೇಂದ್ರ** ಹಾಗೂ ಶ್ರೀಮತಿ ಸುಶೀಲಾ ಮತ್ತು ರಾಘವೇಂದ್ರ ರಾವ್ ಹಿರಿಯಡ್ಕ ಇವರ ಪುತ್ರಿ **ರೇಖಾ** ಇವರ ವಿವಾಹವು ತಾ.27-2-2009ರಂದು ಉಡುಪಿ ರಥಬೀದಿಯಲ್ಲಿರುವ ಶ್ರೀ ಕೃಷ್ಣಸಭಾಭವನದಲ್ಲಿ ಜರಗಿತು.

ಬೆಂಗಳೂರು ಯಶವಂತಪುರದಲ್ಲಿರುವ ಶ್ರೀಮತಿ ಮುಕ್ತ ಹಾಗೂ ಶ್ರೀ ರಾಮಚಂದ್ರ ಜೋಯಿಸರವರ ಪುತ್ರ **ರಜನೀಶ್** ಹಾಗೂ ಮೂಡಿಗೆರೆ ಹಳುವಳ್ಳಿಯ ಶ್ರೀಮತಿ ಇಂದಿರಾ ಹಾಗೂ ಶ್ರೀ ಪುರುಷೋತ್ತಮ್ ಇವರ ಪುತ್ರಿ **ವಿಂದ್ಯಾ** ಇವರ ವಿವಾಹವು ತಾ.27-2-2009 ರಂದು ಉಡುಪಿ ಲಕ್ಷ್ಮೀಸಭಾಭವನದಲ್ಲಿ ನೆರವೇರಿತು.

## ಬ್ರಹ್ಮೋಪದೇಶ

**ಚಿ| ಹರಿಪ್ರಸಾದ್**

ಶ್ರೀಮತಿ ನಾಗವಲ್ಲಿ ಎಸ್. ಮತ್ತು ಶ್ರೀ ಸುಬ್ರಹ್ಮಣ್ಯ ವಿ. ರಾವ್, ಕಾಡುಹೊಳೆ ಇವರ ಪುತ್ರ ಹರಿಪ್ರಸಾದ್‌ನ ಬ್ರಹ್ಮೋಪದೇಶ ಸಮಾರಂಭವು ತಾ.13-2-2009ರಂದು ಎಣ್ಣೆಹೊಳೆ ಶ್ರೀ ಜಯರಾಮ ಭಟ್ ಸಭಾಭವನದಲ್ಲಿ ನೆರವೇರಿತು.

**ಚಿ| ಸಂದೀಪ**

ಕಬ್ಬಿನಾಲೆ ಕುಚ್ಚೂರು ಶ್ರೀ ಶ್ರೀಕಾಂತ ಹೆಬ್ಬಾರರ ಪುತ್ರ ಚಿ| ಸಂದೀಪನ ಬ್ರಹ್ಮೋಪದೇಶ ಸಮಾರಂಭವು ತಾ.15-2-2009ರಂದು ಕಬ್ಬಿನಾಲೆ ಕುಚ್ಚೂರಿನ ಅವರ ಮನೆ 'ವನಸಿರಿ'ಯಲ್ಲಿ ನೆರವೇರಿತು.

## ಶ್ರೀಶಾರದಾ ಟ್ರೋಫಿ-2009

## ನಗದು ಬಹುಮಾನ

ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಆಶ್ರಯದಲ್ಲಿ ತಾ.25-1-2009ರಂದು ನಡೆದ ಶ್ರೀಶಾರದಾ ಟ್ರೋಫಿ ಪಂದ್ಯಾವಳಿಯಲ್ಲಿ ಪ್ರತಿವರ್ಷದಂತೆ ಪ್ರಥಮ, ದ್ವಿತೀಯ ಬಹುಮಾನ ಮೊತ್ತವನ್ನು ಶ್ರೀ ಅಲೆವೂರು ಶ್ಯಾಮರಾವ್ ತಮ್ಮ ಮಾತಾಪಿತೃಗಳಾದ ದಿ| ಕೆ. ಭುಜಂಗರಾವ್ ಹಾಗೂ ದಿ| ಶಾಂತಾ ಬ್ಯಾ ದಂಪತಿಗಳ ಸ್ಮರಣಾರ್ಥ ಪ್ರಾಯೋಜಿಸಿರುತ್ತಾರೆ. ಕಳೆದ ಸಂಚಿಕೆಯಲ್ಲಿ ಇದು ತಪ್ಪಾಗಿ ಮುದ್ರಿತವಾಗಿತ್ತು.

**ಚಿ| ವಿಘ್ನೇಶ**

ಬೆಳ್ಮಣ್ಣು ಶ್ರೀ ಸುರೇಶ್ ರಾಯರ ಪುತ್ರ ಚಿ| ವಿಘ್ನೇಶನ ಬ್ರಹ್ಮೋಪದೇಶ ಸಮಾರಂಭವು ತಾ.27-2-2009ರಂದು ಬೆಳ್ಮಣ್ಣು ಶ್ರೀ ದುರ್ಗಾ ಪರಮೇಶ್ವರೀ ದೇವಸ್ಥಾನದಲ್ಲಿ ಜರಗಿತು.

ಶ್ರೀಶಾರದಾ ದೇವಸ್ಥಾನದಲ್ಲಿ
**ಫೆಬ್ರವರಿ ತಿಂಗಳಲ್ಲಿ**
**ತಾ.11-04-2009ರ ಶನಿವಾರ**
ಸಂಜೆ ಗಂಟೆ 5-00ರಿಂದ

### ಗಮಕವಾಚನ-ಪ್ರವಚನ

ಕಾರ್ಯಕ್ರಮವು ನಡೆಯಲಿದೆ.
ವಾಚನ : ಭಾಗವತ, ಗಮಕಿ ನೀಲಾವರ **ಲಕ್ಷ್ಮೀನಾರಾಯಣರಾವ್**
ಪ್ರವಚನ : ಹವ್ಯಾಸಿ ತಾಳಮದ್ದಳೆ ಅರ್ಥಧಾರಿ, ನಾಟಕಕಾರ, ಪ್ರವಚನಕಾರ **ಶ್ರೀ ಬಾರ್ಕೂರು ನಾಗೇಶರಾವ್.**

**ಸರ್ವರಿಗೂ ಆದರದ ಸ್ವಾಗತ**

**- ಶ್ರೀಶಾರದಾ ದೇವಸ್ಥಾನ ವೇದಿಕೆ**

### ಸಾಮೂಹಿಕ ಗಣಹೋಮ

ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತಿ ತಿಂಗಳು **ಸಂಕಷ್ಟಹರ ಚತುರ್ಥಿಯಂದು** ನಡೆಯುತ್ತಿರುವ

**ಸಾಮೂಹಿಕ ಗಣಹೋಮವು**

ತಾ.13-04-2009ರಂದು ನಡೆಯಲಿದೆ.

**ಗಣಹೋಮ ಸೇವಾ ಶುಲ್ಕ ರೂ.51/-**

ಗಣಹೋಮ ಸೇವೆ ನೀಡಲು ಇಚ್ಛಿಸುವವರು ಶಾರದಾ ಮಂಟಪದ ಮೆನೇಜರ್‌ರವರನ್ನು ಸಂಪರ್ಕಿಸಲು ಕೋರಲಾಗಿದೆ.

**- ಶ್ರೀಶಾರದಾ ದೇವಸ್ಥಾನ ವೇದಿಕೆ**

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

**ಪ್ರಶ್ನೆ ಕೇಳಿದವರು : ಯು. ಅರವಿಂದಕುಮಾರ್** **ಉತ್ತರಿಸಿದವರು : ಡಾ| ವೈ. ಸುದರ್ಶನ ರಾವ್**

**ಪ್ರಶ್ನೆ : ಅತಿಯಾದ ಹಾಗೂ ಸತತ ಬಿಕ್ಕಳಿಕೆಗೆ ಕಾರಣಗಳೇನು?**

**ಉತ್ತರ :** ಎದೆಗೂಡು ಹಾಗೂ ಹೊಟ್ಟೆಯ ಮಧ್ಯೆ ವಪೆಯೆಂಬ ಮಾಂಸಖಂಡವಿದೆ. ಇದು ಉಸಿರಾಟಕ್ಕೆ ಸಹಾಯ ಮಾಡುಜತಟ್ಟಿಜದೆ. ಬಿಕ್ಕಳಿಕೆಯುಂಟಾಗಲು ವಪೆಯು ಒಮ್ಮೆಲೆ ಸಂಕುಚಿತವಾಗುವುದೇ ಕಾರಣ. ಇದನ್ನು ನೀವು ಖಾರ ತಿಂದಾಗ ಗಮನಿಸಿರಬಹುದು. ಖಾರವಾದ ವಸ್ತುವು ಅನ್ನನಾಳವನ್ನು ಸೇರಿದಾಗ ಅಲ್ಲಿಂದ ಸಂದೇಶಗಳು ಮೆದುಳಿಗೆ ಹೋಗಿ, ಅಲ್ಲಿಂದ ಪ್ರತಿ ಸಂದೇಶಗಳು ವಪೆಗೆ ಬಂದು ಅದು ಬಿಗಿಯಾಗಿ ಸಂಕುಚಿತ ಆ ವಸ್ತುವನ್ನು ಹೊರಹಾಕಲು ಪ್ರಯತ್ನಿಸುವ ಚಲನೆಯೇ ಬಿಕ್ಕಳಿಕೆ.

ಅತಿಯಾದ ಬಿಕ್ಕಳಿಕೆಗೆ ಕಾರಣಗಳು :

1) ಅನ್ನನಾಳ ಹಾಗೂ ಜಠರದಲ್ಲಿನ ಖಾಯಿಲೆಗಳು
(ಉದಾ : ಅನ್ನನಾಳದ ಹಾಗೂ ಜಠರದ ಉರಿಯೂತ (Gastritis and esophagitis)
2) ನೇರವಾಗಿ ವಪೆಯನ್ನು ಪ್ರಚೋದಿಸುವ ಖಾಯಿಲೆಗಳು
(ಉದಾ : ವಪೆಗೆ ತಾಗಿ ಕೀವು ತುಂಬಿರುವುದು. ಗಡ್ಡೆ ಬೆಳೆಯುವುದು. ಪಿತ್ತಜನಕಾಂಗವು ವಪೆಗೆ ತಾಗಿಯೆ ಇರುವುದರಿಂದ ಅದರ ಕೆಲವು ಕಾಯಿಲೆಗಳಲ್ಲಿ ಬಿಕ್ಕಳಿಕೆ ಇರಬಹುದು.
3) ವಪೆಯ ನರದ ಹಾದಿಯಲ್ಲಿ ಗಡ್ಡೆ ಅಥವ ದುಗರಸಗ್ರಂಥಿಗಳು ಬೆಳೆದು ನರವನ್ನು ಪ್ರಚೋದಿಸಿದಂತಾಗಿ ಬಿಕ್ಕಳಿಕೆ ಸತತವಾಗಿ ಕಾಡಬಹುದು.
4) ಕಿಡ್ನಿ ವೈಫಲ್ಯ, ಪಿತ್ತಜನಕಾಂಗದ ವೈಫಲ್ಯ, ಮೆದುಳಿನ ಖಾಯಿಲೆಗಳಲ್ಲೂ ಬಿಕ್ಕಳಿಕೆ ಇರಬಹುದು.
5) ಅಧಿಕ ಮಾನಸಿಕ ಒತ್ತಡ

ಹೆಚ್ಚಿನ ಕೇಸುಗಳಲ್ಲಿ ಮೊದಲನೆಯ ಹಾಗೂ ಕೊನೆಯದಾಗಿ ಸೂಚಿಸಿದ ಕಾರಣಗಳಿಂದಾಗಿ ಬಿಕ್ಕಳಿಕೆ ಆರಂಭವಾಗುತ್ತದೆ.

ಬಿಕ್ಕಳಿಕೆ ನಿಲ್ಲಿಸಲು ಸುಲಭೋಪಾಯಗಳು :

ಬಿಕ್ಕಳಿಕೆ ಆರಂಭವಾದ ಕೂಡಲೆ ಒಂದು ಗ್ಲಾಸು ನೀರು ಕುಡಿಯುವುದರಿಂದ ಬಿಕ್ಕಳಿಕೆಯನ್ನು ನಿಲ್ಲಿಸಬಹುದು. ಇನ್ನೂ ನಿಲ್ಲದಿದ್ದರೆ ಒಂದು ನಿಮಿಷ ಉಸಿರು ಬಿಗಿ ಹಿಡಿಯುವುದು ಬಿಕ್ಕಳಿಕೆ ನಿಲ್ಲಿಸಲು ಇನ್ನೊಂದು ಸುಲಭೋಪಾಯ. ಸತತವಾಗಿ ಕಾಡುವ ಬಿಕ್ಕಳಿಕೆಯಲ್ಲಿ ಒಂದು ಪ್ಲಾಸ್ಟಿಕ್ ತೊಟ್ಟೆಯೊಳಗೆ ಮುಖ ಮುಚ್ಚಿಕೊಂಡು ಬಿಟ್ಟ ಉಸಿರನ್ನೇ ಪುನಃ ಉಸಿರಾಡುವ ಉಪಾಯ ಕೆಲವೊಮ್ಮೆ ಫಲಕೊಡಬಹುದು. ಹಿಕ್... ಇನ್ನೂ ನಿಲ್ಲದಿದ್ದರೆ ತಜ್ಞರ ಮೊರೆಹೋಗುವುದು ಅನಿವಾರ್ಯ.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು.**
**ಸಂಚಾರಿ ದೂರವಾಣಿ ನಂ. : 98451 36322**

## ಅರ್ಚಕರು ಬೇಕಾಗಿದ್ದಾರೆ

### ಶ್ರೀ ಶಾರದಾ ದೇವಸ್ಥಾನ, ಕುಂಜಿಬೆಟ್ಟು, ಉಡುಪಿ

ಶ್ರೀ ಶಾರದಾ ದೇವಸ್ಥಾನಕ್ಕೆ ಪೂಜಾ ವಿಧಿ-ವಿಧಾನಗಳನ್ನು ಬಲ್ಲ ಓರ್ವ ಅರ್ಚಕರು ಬೇಕಾಗಿದ್ದಾರೆ. ಅರ್ಚಕರಿಗೆ ವಾಸ್ತವ್ಯಕ್ಕೆ ಮನೆ ವ್ಯವಸ್ಥೆಯಿದ್ದು, ಪೂರ್ಣಾವಧಿ ಶ್ರೀ ಶಾರದಾ ದೇವಸ್ಥಾನದಲ್ಲಿ ಇರಬೇಕಾಗುತ್ತದೆ.

*ಆಸಕ್ತರು ಕೂಡಲೇ ವಿವರಗಳೊಂದಿಗೆ ಸಂಪರ್ಕಿಸಿರಿ :*

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು , ಉಡುಪಿ-2.**

## ಶಾಲಿಪುರ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ

ಕೊಕ್ರಾಡಿ, ಬೆಳ್ತಂಗಡಿ ತಾಲೂಕು, ದ.ಕ.

ಆಸ್ತಿಕ ಬಾಂಧವರಲ್ಲಿ ನಿವೇದನೆ,

ಜನರ ಭಕ್ತಿ ಶ್ರದ್ಧೆಗಳ ಕೇಂದ್ರವಾದ ದೇವಾಲಯಗಳು ನಮ್ಮ ಸಂಸ್ಕೃತಿಯ ಸಂವರ್ಧನೆಯಲ್ಲಿ ಮಹತ್ವದ ಪಾತ್ರವಹಿಸುತ್ತವೆ.

ಸುಮಾರು 800 ವರ್ಷಗಳ ಹಿಂದೆ ಪ್ರತಿಷ್ಠಾಪನೆಗೊಂಡು ತುಳುನಾಡಿನ ಬೈರವ ಅರಸರ ಕಾಲದಲ್ಲಿ ನಾರಾವಿ ಮಾಗಣೆಗೆ ಒಳಪಟ್ಟ ಕೊಕ್ರಾಡಿ ಗ್ರಾಮ ಹಾಗೂ ಸುತ್ತಮುತ್ತಲಿನ ಗ್ರಾಮದ ಜನರ ಅತಿಶಯ ಭಕ್ತಿಯ ಕೇಂದ್ರ ಶಾಲಿಪುರ (ಸಾಲಿಯೂರು) ಶ್ರೀ ಸುಬ್ರಹ್ಮಣ್ಯ ದೇವಾಲಯ.

ಗುರುವಾಯನಕೆರೆ ನಾರಾವಿ ರಾಜಮಾರ್ಗದಲ್ಲಿ ಗುರುವಾಯನಕೆರೆಯಿಂದ ಸುಮಾರು 17ಕಿ.ಮೀ. ದೂರದಲ್ಲಿ ಹಾಗೂ ವೇಣೂರು – ನಾರಾವಿ ಮಾರ್ಗದಲ್ಲಿ ವೇಣೂರಿನಿಂದ 11ಕಿ.ಮೀ. ದೂರದ ಕೊಕ್ರಾಡಿ ಗ್ರಾಮದಲ್ಲಿ ನಯನ ಮನೋಹರ ರಮಣೀಯ ಸ್ಥಳದಲ್ಲಿ ಈ ದೇವಾಲಯವಿದೆ. ಇಲ್ಲಿ ಪ್ರಧಾನ ದೇವರು ಶ್ರೀ ಸುಬ್ರಹ್ಮಣ್ಯ ಸ್ವಾಮಿ, ಉಪದೇವತೆಯಾಗಿ ಶ್ರೀ ಮಹಾಗಣಪತಿ ದೇವರು, ಮೂಲಶಕ್ತಿಯಾಗಿ ಶ್ರೀ ನಾಗದೇವರುಗಳನ್ನು ಪ್ರತಿಷ್ಠಾಪಿಸಲಾಗಿದೆ. ಇದಲ್ಲದೆ ಈ ಪುಣ್ಯಕ್ಷೇತ್ರದಲ್ಲಿ ಕೊಡಮಣಿತ್ತಾಯ ಪಂಜುರ್ಲಿ ಮತ್ತು ರಕ್ತೇಶ್ವರಿಯಾದಿ ಪಂಚದೈವಗಳ ಸಾನ್ನಿಧ್ಯವಿದೆ. ಸದ್ಯ ದೇವಸ್ಥಾನ ಜೀರ್ಣಾವಸ್ಥೆಯಲ್ಲಿದ್ದು ಶೀಘ್ರಾತಿಶೀಘ್ರ ಜೀರ್ಣೋದ್ಧಾರಗೊಳ್ಳಬೇಕಾದ ತುರ್ತು ಅವಶ್ಯಕತೆ ಇದೆ. ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಪರಮಾನುಗ್ರಹ ಪಡೆದು ಈ ಕೆಲಸಕ್ಕೆ ನಾವು ತೊಡಗಿರುತ್ತೇವೆ. ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳು ಸಂರಕ್ಷಕರಾಗಿ ನಮ್ಮನ್ನು ಮುನ್ನಡೆಸಲು ಅನುಗ್ರಹಿಸಿರುತ್ತಾರೆ. ತಾ.04-12-2008 ರಂದು ಶಿಲಾಮುಹೂರ್ತದಿಂದ ಮೊದಲ್ಗೊಂಡು ಶಿಲಾಮಯ ಗರ್ಭಗುಡಿ, ತೀರ್ಥಮಂಟಪ ಹಾಗೂ ಗಣಪತಿ ದೇವರ ಗುಡಿಗಳನ್ನು ನಿರ್ಮಿಸಲು ಸಂಕಲ್ಪಿಸಲಾಗಿದೆ. ಸುತ್ತುಪೌಳಿ, ವಸಂತ ಮಂಟಪ, ಅಡುಗೆ ಕೋಣೆ, ತೀರ್ಥಬಾವಿ, ದೇವಾಲಯದ ಕಾರ್ಯಾಲಯ ಹಾಗೂ ದೈವಗಳ ಗುಡಿಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಎಲ್ಲಾ ಕಾಮಗಾರಿಗಳಿಗೆ ರೂಪ್ಯಾ 50ಲಕ್ಷ ವೆಚ್ಚ ತಗಲುವುದೆಂದು ಅಂದಾಜಿಸಲಾಗಿದೆ.

ಈಗಾಗಲೇ ದಿನಾಂಕ 18-08-2007ರಂದು ಶ್ರೀ ಮುನಿಯಂಗಳ ಮಹೇಶ ಭಟ್ಟರ ನಿರ್ದೇಶನದಲ್ಲಿ ಶ್ರೀ ನಾಗದೇವರಿಗೆ ಸುಮಾರು ರೂಪ್ಯಾ ಒಂದು ಲಕ್ಷ ವೆಚ್ಚದಲ್ಲಿ ನೂತನ ಚಿತ್ರಕೂಟವನ್ನು ನಿರ್ಮಿಸಿ ದೇವಸ್ಥಾನದಲ್ಲಿದ್ದ 18 ಪುರಾತನ ನಾಗಬಿಂಬಗಳನ್ನು ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ಪುನಃಪ್ರತಿಷ್ಠಾಪಿಸಲಾಗಿದೆ.

ಈಗ ಕೈಗೆತ್ತಿಕೊಂಡಿರುವ ಸಂಪೂರ್ಣ ಜೀರ್ಣೋದ್ಧಾರ ಕೆಲಸವು ಶ್ರೀದೇವರ ಹಾಗೂ ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳ ಅನುಗ್ರಹದಿಂದ, ಭಕ್ತಮಹಾಜನರ ತನು-ಮನ-ಧನಗಳ ಸಹಕಾರದಿಂದ ನಡೆಯಬೇಕಾಗಿದೆ. ಬಿಂದುಗಳು ಕೂಡಿ ಸಿಂಧುವಾಗಬೇಕಾಗಿದೆ. ಇದನ್ನು ಮನಗಂಡು ಆಸ್ತಿಕ ಮಹಾಜನರು ಈ ಧಾರ್ಮಿಕ ಮಹಾಕಾರ್ಯಕ್ರಮಕ್ಕೆ ಸರ್ವರೀತಿಯ ಸಹಾಯ ಮಾಡಬೇಕಾಗಿ ವಿನಂತಿಸುತ್ತೇವೆ.

ತಮಗೆ ಶ್ರೀ ಸುಬ್ರಹ್ಮಣ್ಯ ಸ್ವಾಮಿ, ಶ್ರೀ ಮಹಾಗಣಪತಿ, ಶ್ರೀ ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳ ಅನುಗ್ರಹವಾಗಿ ಸಕಲ ಸನ್ಮಂಗಲವು ಲಭಿಸಲೆಂದು ಪ್ರಾರ್ಥಿಸಿಕೊಳ್ಳುತ್ತೇವೆ.

**– ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಸರ್ವಸದಸ್ಯರು, ಜೀರ್ಣೋದ್ಧಾರ ಸಮಿತಿ.**

## ವಧು-ವರರ ವೇದಿಕೆ

### ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ.

ಸಮಾಜದ ವಿವಾಹ ಯೋಗ್ಯ ವಧು-ವರರ ನೋಂದಾವಣೆ, ವಿವಿಧ ಮಾಹಿತಿ ಮೊದಲಾದವುಗಳನ್ನು ಆಸಕ್ತ ಹೆತ್ತವರು ಪಡೆದುಕೊಂಡು ಪರಸ್ಪರ ವಿಚಾರ ವಿನಿಮಯ ಮಾಡಲು ಅವಕಾಶವಿದೆ. ಸಮಾಜ ಬಾಂಧವರು ವೇದಿಕೆಯ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿ.

**- ಅಧ್ಯಕ್ಷರು, ವಧೂವರರ ವೇದಿಕೆ, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ**


## ದೇವಿಕೃಪಾ ಏಜೆನ್ಸೀಸ್, ನಂದಿಕೂರು



**ಫೋನ್ : 2556536 (R), 2555466 (O)**

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**

ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು


## ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತಿ ಬುಧವಾರ ಸೌಂದರ್ಯಲಹರೀ ಪಾರಾಯಣ



ಆಚಾರ್ಯ ಶಂಕರಭಗವತ್ಪಾದರಿಂದ ರಚಿತವಾದ ಸೌಂದರ್ಯಲಹರೀ ಸ್ತೋತ್ರವು ಸ್ತೋತ್ರಗಳಲ್ಲಿಯೇ ವಿಶಿಷ್ಟವಾದದ್ದು. ಇದು ಶಕ್ತಿ, ವಿದ್ಯೆ ಹಾಗೂ ಲಕ್ಷ್ಮೀಸ್ವರೂಪಿಣಿಯಾದ ವಿಶ್ವಮಾತೆಯನ್ನು ಕುರಿತಾದ ಸ್ತೋತ್ರ. ಇದರ ಒಂದು ಪದ್ಯದಲ್ಲಿ ಆಚಾರ್ಯರು-''ತಾಯೀ! ನೀನು ಸರಸ್ವತೀ, ಲಕ್ಷ್ಮೀ, ಪಾರ್ವತೀ ಮಾತ್ರವಾಗಿರದೆ ಇವೆಲ್ಲವನ್ನು ಮೀರಿದ ತುರೀಯಳೂ ಪರಮಾನಂದಸ್ವರೂಪಳೂ, ಪರಬ್ರಹ್ಮನ ಶಕ್ತಿಯೂ ಆಗಿದ್ದೀಯೆ''-ಎಂದು ವರ್ಣಿಸುತ್ತಾರೆ. ಸಾಕಾರವಾಗಿ ಪೂಜೆಗೊಳ್ಳುವ ಅನೇಕ ದೇವಾನುದೇವತೆಗಳ ನಿರಾಕಾರ ಮೂಲಸ್ತೋತ್ರ ಅವಳು. ಆದ್ದರಿಂದ ಜಗನ್ಮಾತೆಯ ಅರ್ಚನೆ ಸಕಲದೇವತೆಗಳ ಅರ್ಚನೆ. ನಾನಾ ದೇವತೆಗಳ ಆಕಾರವನ್ನೇ ನೆಚ್ಚಿಕೊಂಡು ಆ ಮೂಲಕ ವಿಚ್ಛಿದ್ರತೆಯತ್ತ ಸಾಗುತ್ತಿರುವ ಸಮಾಜದಲ್ಲಿ ದೇವಿಯ ಆರಾಧನೆ ಭಾವೈಕ್ಯವನ್ನು ಭದ್ರಗೊಳಿಸುವ ದಿವ್ಯೌಷಧವಾಗಬಲ್ಲದು. ಅದೂ ಅಲ್ಲದೆ, ಇದು ಕೇವಲ ಸ್ತೋತ್ರಮಾತ್ರವಾಗಿರದೆ ಇದರಲ್ಲಿಯ ಒಂದೊಂದು ಪದ್ಯವೂ ಒಂದೊಂದು ಮಂತ್ರವಾಗಿದೆ. ಬಲ, ವಿದ್ಯೆ, ಸಂಪತ್ತು, ಸಂಗೀತ ನೈಪುಣ್ಯ, ಪುತ್ರಪ್ರಾಪ್ತಿ, ಆರೋಗ್ಯಭಾಗ್ಯ, ಜ್ವರ ಮತ್ತು ಗ್ರಹದೋಷಗಳ ನಿವಾರಣೆ ಇವುಗಳಿಗೆ ಸಾಧಕರು ಈ ಸ್ತೋತ್ರಗಳನ್ನು ಪಠಿಸಿ ಫಲವನ್ನು ಪಡೆದಿದ್ದಾರೆ. ತಮ್ಮ ಅನುಭವವನ್ನು ಇತರರೊಡನೆ ಹಂಚಿಕೊಂಡಿದ್ದಾರೆ. ಸೌಂದರ್ಯಲಹರಿಯ ಪಾರಾಯಣಕ್ಕೆ ಜಾತಿ-ಮತ-ವಯಸ್ಸು-ಲಿಂಗಗಳ ನಿಯಮವಿಲ್ಲ. ಯಾರಾದರೂ ಸರಿಯೆ ನಿಶ್ಚಲಭಕ್ತಿಯಿಂದ ಇದನ್ನು ಪಠಿಸಿ ಮನಃಶಾಂತಿಯನ್ನು ಪಡೆದುಕೊಳ್ಳಬಹುದಾಗಿದೆ ಎಂದು ವೇದಾಂತಭಾರತೀ ಮೈಸೂರು ಇವರಿಂದ ಪ್ರಕಟಿತ ''ಸೌಂದರ್ಯಲಹರೀ'' ಎಂಬ ಪುಸ್ತಕದಲ್ಲಿ ತಿಳಿಸಲಾಗಿದೆ.

**ಪ್ರತಿ ಬುಧವಾರ ಸಂಜೆ ಗಂಟೆ 5-00ರಿಂದ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದ ಶ್ರೀ ಶಾರದಾ ದೇವಸ್ಥಾನದಲ್ಲಿ ಶ್ರೀ ಶಂಕರಭಗವತ್ಪಾದ ವಿರಚಿತ ಪುಣ್ಯ ಕೃತಿ ಶ್ರೀ ದೇವಿ ಸ್ತೋತ್ರ "ಸೌಂದರ್ಯಲಹರೀ" ಪಾರಾಯಣ ನಡೆಯುತ್ತಿದೆ. ನಮ್ಮ ಸಮಾಜ ಬಾಂಧವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ವಿನಂತಿ.**

**– ಮಹಿಳಾ ವೇದಿಕೆ**

## ಬಾಳೆಕುದ್ರು ಮಠದಲ್ಲಿ ಕೋಟಿ ಗಾಯತ್ರಿ ಮಹಾಯಾಗ



ಹಂಗಾರಕಟ್ಟೆ ಶ್ರೀಮಠ ಬಾಳೆಕುದ್ರು ಇಲ್ಲಿಯ ಪೀಠಾಧಿಪತಿಗಳಾಗಿರುವ ಶ್ರೀ ಶ್ರೀ ನೃಸಿಂಹಾಶ್ರಮ ಮಹಾಸ್ವಾಮಿಗಳವರ ಮಾರ್ಗದರ್ಶನದಲ್ಲಿ ತಾ.03-04-2009ರಿಂದ ತಾ.10-04-2009ರ ವರೆಗೆ ಶ್ರೀಮಠದಲ್ಲಿ ಕೋಟಿ ಗಾಯತ್ರಿ ಮಹಾಯಾಗವು ನೆರವೇರಲಿದೆ. ಪ್ರತಿದಿನ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ವಿವಿಧ ವಿಚಾರಗಳ ಪ್ರವಚನ, ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳಲಾಗಿದೆ. ತಾ.10ರಂದು ಕೋಟಿ ಗಾಯತ್ರಿ ಮಹಾಯಾಗ ಹಾಗೂ ಸಹಸ್ರ ಋತ್ವಿಜರಿಂದ ಗಾಯತ್ರೀ ಜಪಯಜ್ಞವು ನೆರವೇರಲಿದೆ. ಅಂದು ಸಂಜೆ ಗಂಟೆ 5-00ರಿಂದ ಶ್ರೀ ಶ್ರೀ ನೃಸಿಂಹಾಶ್ರಮ ಮಹಾಸ್ವಾಮಿಗಳ ತೃತೀಯ ವರ್ಧಂತ್ಯೋತ್ಸವದ ಅಂಗವಾಗಿ ಪುರಮೆರವಣಿಗೆ ಮತ್ತು 7 ಗಂಟೆಗೆ ಗುರುವಂದನಾ ಕಾರ್ಯಕ್ರಮವೂ ನೆರವೇರಲಿದೆ.

ಈಗಾಗಲೇ ಹಲವಾರು ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಕಾರ್ಯಕ್ರಮಗಳ ಬಗ್ಗೆ ಹೆಚ್ಚಿನ ಕಾಳಜಿ ವಹಿಸುತ್ತಿರುವ ಶ್ರೀ ಶ್ರೀ ಗಳು ಇನ್ನೂ ಕೆಲವು ಧಾರ್ಮಿಕ ಹಾಗೂ ಸಾಮಾಜಿಕ ಕಳಕಳಿಯ ವಿನೂತನ ಯೋಜನೆಗಳನ್ನು ಘೋಷಿಸುವವರಿದ್ದಾರೆ.

ಈ ಮೇಲಿನ ಎಲ್ಲಾ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತ ಬಾಂಧವರು ಆಗಮಿಸಿ, ಕೃತಾರ್ಥರಾಗಬೇಕೆಂದು ಶ್ರೀಮಠದ ಪ್ರಕಟಣೆ ತಿಳಿಸಿದೆ.

## ಕಟೀಲು, ಸಿತ್ಲ ಸುಬ್ರಾಯ ಶ್ಯಾನುಭೋಗರ ಮನೆ-ಸತ್ಯಪ್ರಭಾ

ದಿನಾಂಕ 10-04-2009ನೇ ಶುಕ್ರವಾರ ಪ್ರಾತಃ ಗಂಟೆ 8-49ಕ್ಕೆ

ಸಿತ್ಲ ಸ್ಥಳದ ನಮ್ಮ ಹಿರಿಯರು ಆರಾಧಿಸಿಕೊಂಡು ಬಂದಿರುವ
ನಾಗಬನದಲ್ಲಿ ನಿರ್ಮಿಸಿರುವ ನೂತನ ಕಟ್ಟೆಯಲ್ಲಿ

**ನಾಗಬಿಂಬಗಳ ಪುನಃ ಪ್ರತಿಷ್ಠೆ**
**ಹಾಗೂ ನೂತನ ಪ್ರಸಾದಗಳಲ್ಲಿ ಆರಾಧ್ಯ ದೈವಗಳಾದ**
**ಶ್ರೀ ಧೂಮಾವತೀ ಹಾಗೂ ಗುಳಿಗ ದೈವಗಳ ಪ್ರತಿಷ್ಠೆ**

ತಂತ್ರಿಯವರಾದ ಶ್ರೀ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಸಂಪನ್ನಗೊಳ್ಳಲಿರುವವು.

| | |
|---|---|
| ತಾ.09-4-2009, ಗುರುವಾರ | **ಸಾಯಂಕಾಲ ದೇವತಾ ಪ್ರಾರ್ಥನೆ** |
| ತಾ.10-4-2009, ಶುಕ್ರವಾರ | **ಪ್ರಾತಃ 8-49ರಿಂದ ಶ್ರೀ ನಾಗಪ್ರತಿಷ್ಠೆ, ಕಲಶಾಭಿಷೇಕ** |
| | **ದಿವಾ ಗಂಟೆ 2-00ಕ್ಕೆ ಅನ್ನಸಂತರ್ಪಣೆ** |
| | **ರಾತ್ರಿ 10-00 ಗಂಟೆಗೆ ದೈವಗಳ ನೇಮೋತ್ಸವ** |

ಈ ಶುಭ ಕಾರ್ಯಗಳಿಗೆ ಎಲ್ಲರೂ ಪೂರ್ಣ ಸಹಕಾರ ನೀಡಿ, ಭಾಗವಹಿಸಿ,
ಶ್ರೀ ದೇವರ, ದೈವಗಳ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಅಪೇಕ್ಷೆ.

**ಸಿತ್ಲ ಸುಬ್ರಾಯ ಶ್ಯಾನುಭೋಗ್ ಮತ್ತು ಕುಟುಂಬಿಕರು**

ದೂರವಾಣಿ : 94490 07013

Owned & Published by : K. Venugopal Rao, Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754